## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ದಿನಾಂಕಃ 01–03–2014 ರಂದು ನಡೆಸಲಾದ ವಿಷಯಗಳ ಸಭೆಯ ನಡವಳಿಗಳು**

| ಕ್ರ. ಸಂ. | ಹಾಜರಿದ್ದ ಸಮಿತಿಯ ಪದಾಧಿಕಾರಿಗಳು ಶ್ರೀಯುತರಾದ | |
|---|---|---|
| **1** | **ಬಿ.ಸೋಮಶೇಖರ್** | **ಅಧ್ಯಕ್ಷರು** |
| 2 | ಗೌತಮ್ ಕುಮಾರ್.ಎಮ್. | ಸದಸ್ಯರು |
| 3 | ಸವಿತಾ ರಮೇಶ್ | ಸದಸ್ಯರು |
| 4 | ಕೆ.ರವೀಂದ್ರ | ಸದಸ್ಯರು |
| 5 | ಗೀತಾ ವಿವೇಕಾನಂದ | ಸದಸ್ಯರು |
| 6 | ಎನ್.ಶಾಂತಕುಮಾರಿ | ಸದಸ್ಯರು |
| 7 | ಕೆ.ಎನ್.ಆಂಜನೇಯರೆಡ್ಡಿ | ಸದಸ್ಯರು |
| 8 | ಶ್ರೀವಿದ್ಯಾ.ಎನ್. | ಸದಸ್ಯರು |
| 9 | ಪಿ.ಸೌಮ್ಯ | ಸದಸ್ಯರು |
| 10 | ಲಕ್ಷ್ಮಿ ಚಿಕ್ಕೇಗೌಡ | ಸದಸ್ಯರು |
| 11 | ಕೆ.ಎಲ್.ತಿಮ್ಮನಂಜಯ್ಯ | ಸದಸ್ಯರು |

| ಕ್ರ. ಸಂ. | ಹಾಜರಿದ್ದ ಅಧಿಕಾರಿಗಳು |
|---|---|
| 1 | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 2 | ಅಧೀಕ್ಷಕ ಅಭಿಯಂತರರು, ರ.ಮೂ.ಭೂ ಸೌಕರ್ಯ. |
| 3 | ಕಾರ್ಯಪಾಲಕ ಅಭಿಯಂತರರು, ರ.ಮೂ.ಭೂ ಸೌಕರ್ಯ, ಟಿ.ಇ.ಸಿ, |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲಿಸಲಾಯಿತು)

**01] ವಿಷಯ ಸಂಖ್ಯೆಃ ಬೃ.ಸಾ.ಕಾ.ಸ್ಥಾ.ಸ: 59/2013–14**

ವಿಶೇಷ ಆಯುಕ್ತರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆಃ 187ರ ಪುಟ್ಟೇನಹಳ್ಳಿ ಕೆರೆಕೋಡಿ ಕಾಲುವೆಯಿಂದ ಅಯೋಧ್ಯ ನಗರದ ವರೆಗೆ ಸುಮಾರು 968.00ಮೀ ನಷ್ಟು ಉದ್ದದ ಆರ್.ಸಿ.ಸಿ. "U" ಆಕಾರದ ರಾಜಕಾಲುವೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆವತಿಯಿಂದ ಈಗಾಗಲೇ ನಿರ್ಮಿಸಲಾಗಿರುತ್ತದೆ. ಈ ಕಾಲುವೆಯ ಸರಪಳಿ: 100.00 ಮೀ ನಿಂದ 195.00 ವರೆಗೆ ಹಾದುಹೋಗುವ ಮಳೆನೀರಿನ ಚರಂಡಿಯ ಎರಡೂ ಅಂಚಿನಲ್ಲಿ 19 ನಿವೇಶನಗಳಿದ್ದು, ಈ ನಿವೇಶನಗಳಿಗೆ ಪ್ರವೇಶಿಸಲು ಸಂಪರ್ಕ ರಸ್ತೆ ಇರುವುದಿಲ್ಲ. ಈ ಎಲ್ಲಾ 19 ನಿವೇಶನಗಳ ಮಾಲೀಕರು ಕಟ್ಟಡ ನಿರ್ಮಿಸಿಕೊಂಡು ವಾಸ ಮಾಡಲು ಸಂಪರ್ಕ ರಸ್ತೆಯು ಅತ್ಯವಶ್ಯಕವಾಗಿದ್ದು ಕಾಂಕ್ರಿಟ್ ಡೆಕ್‌ನಿಂದ ಕವರ್ ಮಾಡಿಕೊಳ್ಳಲು ಪಾಲಿಕೆಯಿಂದ ಅನುಮತಿ ಕೋರಲಾಗಿರುತ್ತದೆ. ಹಾಲಿ ಇರುವ ಡ್ರೈನ್ ಮೇಲೆ ಬಿ.ಬಿ.ಎಂ.ಪಿ. ಅಭಿಯಂತರರುಗಳ ಮೇಲುಸ್ತುವಾರಿಯಲ್ಲಿ ವಿನ್ಯಾಸ ಹಾಗೂ ವಿಶಿಷ್ಟ ವಿವರಣೆಗಳಿಗೆ ತಕ್ಕಂತೆ ತಮ್ಮ ಸ್ವಂತ ಖರ್ಚಿನಲ್ಲಿ ಆರ್.ಸಿ.ಸಿ. ಕಾಂಕ್ರಿಟ್ ಡೆಕ್‌ಅನ್ನು ನಿರ್ಮಿಸಿಕೊಳ್ಳಲು ಈ ಕೆಳಕಂಡ ಷರತ್ತುಗಳೊಂದಿಗೆ ಸದರಿಯವರಿಗೆ ಅನುಮತಿ ನೀಡಬಹುದೆಂದು ಅಭಿಪ್ರಾಯ ಪಡಲಾಗಿದೆ.

1. ಪ್ರಸ್ತಾಪಿತ ಜಾಗದಲ್ಲಿ ಸಂಪರ್ಕ ರಸ್ತೆಯನ್ನು ಮಾತ್ರ ನಿರ್ಮಾಣ ಮಾಡಬೇಕು ಮತ್ತು ಈ ಜಾಗಕ್ಕೆ ಕಲ್ಲು ನೆಟ್ಟು ಸರಹದ್ದನ್ನು ಗುರುತು ಮಾಡುವುದು ಹಾಗೂ ರಸ್ತೆಗಲ್ಲದೇ ಯಾವುದೇ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.
2. ರಸ್ತೆಯನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಉಪಯೋಗಿಸಬೇಕು ಮತ್ತು ಇದರ ಮೇಲೆ ಬಿ.ಬಿ.ಎಂ.ಪಿ ಹೊರತುಪಡಿಸಿ ಖಾಸಗೀಯವರಾಗಲೀ ಅಥವಾ ಇನ್ನಿತರೇ ಯಾರೇ ಅಗಲೀ ಯಾವುದೇ ಹಕ್ಕನ್ನು ಹೊಂದಿರತಕ್ಕದ್ದಲ್ಲ.
3. ಮಳೆನೀರು ಚರಂಡಿಗೆ ನಿರ್ಮಿಸುವ ಸೇತುವೆಯು ಬಿ.ಬಿ.ಎಂ.ಪಿ. ನೀಡುವ ವಿನ್ಯಾಸಕ್ಕೆ ಅನುಗುಣವಾಗಿ ನಿರ್ಮಿಸಬೇಕು ಹಾಗೂ ಹರಿಯುವ ನೀರಿಗೆ ತೊಂದರೆಯಾಗಬಾರದು.
4. ಸದರಿ ಮಳೆ ನೀರು ಚರಂಡಿಯ ಮೇಲೆ ಬೃಹತ್ ನೀರುಗಾಲುವೆ, ಬಿ.ಬಿ.ಎಂ.ಪಿ ಎಂಬ ನಾಮಫಲಕ ಪ್ರದರ್ಶಿಸತಕ್ಕದ್ದು.
5. ಸದರಿ ಕಾಮಗಾರಿಗೆ ತಗಲುವ ಸಂಪೂರ್ಣ ವೆಚ್ಚವನ್ನು ಸ್ವತ್ತಿನ ಮಾಲೀಕರೇ ಭರಿಸಿಕೊಳ್ಳತಕ್ಕದ್ದು.
6. ಕಾಮಗಾರಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಅನುಮೋದನೆಗೊಂಡ ನಕ್ಷೆಯಂತೆ ಹಾಗೂ ಮಹಾನಗರ ಪಾಲಿಕೆಯು ನೀಡುವ ನಿರ್ದೇಶನದಂತೆ ಕಾಮಗಾರಿಯನ್ನು ನಿರ್ವಹಿಸತಕ್ಕದ್ದು.
7. ಅನುಮತಿಸಿದ ಭಾಗದ ಚರಂಡಿಯನ್ನು ನಿರಂತರವಾಗಿ ನಿಮ್ಮ ಸ್ವಂತ ವೆಚ್ಚದಲ್ಲಿ ಸ್ವಚ್ಛಗೊಳಿಸಿ ನಿರ್ವಹಣೆಯನ್ನು ಕನಿಷ್ಟ ಪಕ್ಷ 6 ತಿಂಗಳಿಗೊಮ್ಮೆ ಮಾಡತಕ್ಕದ್ದು, ಮಳೆ ನೀರಿನ ಸ್ವಾಭಾವಿಕ ಹರಿವಿಗೆ ಅಡೆತಡೆ ಇಲ್ಲದಂತೆ ನೋಡಿಕೊಳ್ಳತಕ್ಕದ್ದು. (ದಾಖಲೆಯನ್ನು ಪಾಲಿಕೆಗೆ ಸಲ್ಲಿಸಬೇಕು)
8. ಕಾಮಗಾರಿ ನಿರ್ವಹಿಸುವ ಸಮಯದಲ್ಲಿ, ಕಾಮಗಾರಿ ನಂತರದಲ್ಲಿ ಪಾಲಿಕೆಯ ಚರಂಡಿಯ ಭದ್ರತೆ ಮತ್ತು ರಕ್ಷಣೆಗಾಗಿ ಸದರಿ ಆರ್.ಸಿ.ಸಿ. ಮುಚ್ಚಳಿಕೆ ಮೇಲೆ ಯಾವುದೇ ತರಹದ ವಾಹನ ಸಂಚಾರವನ್ನು ಕಡ್ಡಾಯವಾಗಿ ನಿಷೇದಿಸತಕ್ಕದ್ದು.

9. ಕಾಮಗಾರಿ ಮುಗಿದ ನಂತರ ಸ್ಥಳದಲ್ಲಿ ಪಾಲಿಕೆ ಅನುಮತಿ ಇಲ್ಲದೇ ಯಾವುದೇ ತರಹದ ವಾಣಿಜ್ಯ ವ್ಯವಹಾರ ನಡೆಸತಕ್ಕದ್ದಲ್ಲ.
10. ಅನುಮತಿಯನ್ನು ರದ್ದುಪಡಿಸುವ ಅಥವಾ ಬೇರೆ ಯಾವುದೇ ಬದಲಾವಣೆ ಮಾಡುವ ಅಧಿಕಾರವನ್ನು ಮಹಾನಗರ ಪಾಲಿಕೆಯು ಹೊಂದಿರುತ್ತದೆ.
11. ಕಾಮಗಾರಿ ನಿರ್ವಹಿಸುವ ಸಮಯದಲ್ಲಿ ಮಳೆ ನೀರಿನ ಚರಂಡಿಗೆ ಹಾಗೂ ಪಾಲಿಕೆ ಸ್ವತ್ತಿಗೆ ಹಾನಿಯಾಗದಂತೆ ನಿರ್ವಹಿಸತಕ್ಕದ್ದು.
12. ಕಾಮಗಾರಿ ನಿರ್ವಹಿಸುವ ಸಮಯದಲ್ಲಿ ಯಾವುದೇ ರೀತಿಯ ಬದಲಾವಣೆಗಳನ್ನು ಮಾಡಬೇಕಾದ ಸಂದರ್ಭ ಬಂದಲ್ಲಿ ಮಹಾನಗರ ಪಾಲಿಕೆವತಿಯಿಂದ ಅನುಮತಿ ಪಡೆಯತಕ್ಕದ್ದು.
13. ಸದರಿ ಚರಂಡಿಯ ಭಾಗ ಹಾಗೂ ಎರಡು ಬದಿಯಲ್ಲಿ ಬಡಲಾಗಿರುವ ರಸ್ತೆ ಜಾಗ ಮತ್ತು ತಾವು ನಿರ್ಮಿಸಲಿರುವ ಆರ್.ಸಿ.ಸಿ.. ಡೆಕ್ ಸ್ಲ್ಯಾಬ್ ಸಹ ಮಹಾನಗರ ಪಾಲಿಕೆಯ ಆಸ್ತಿಯಾಗಿರುತ್ತದೆ. ಇದರ ಮೇಲೆ ಯಾವುದೇ ರೀತಿಯ ಒತ್ತುವರಿಯಾಗದಂತೆ ನೋಡಿಕೊಳ್ಳತಕ್ಕದ್ದು.
14. ಈ ಅನುಮತಿಗೆ ಒಂದು ವರ್ಷದ ಕಾಲಾವಕಾಶ ಇರುತ್ತದೆ. ಈ ಅವಧಿಯೊಳಗಾಗಿ ಕಾಮಗಾರಿಯನ್ನು ಪ್ರಾರಂಭಿಸತಕ್ಕದ್ದು ಹಾಗೂ ಕಾಮಗಾರಿಯ ಪ್ರತಿ ಹಂತದ ವಿವರಗಳನ್ನು ಪಾಲಿಕೆಗೆ ಕಾಲಕಾಲಕ್ಕೆ ತಿಳಿಯಪಡಿಸತಕ್ಕದ್ದು.

ಮೇಲ್ಕಂಡ ಷರತ್ತುಗಳೊಂದಿಗೆ ಉದ್ದೇಶಿತ ಕಾಮಗಾರಿಯನ್ನು ಕೈಗೊಳ್ಳುವ ಪ್ರಸ್ತಾವನೆಗೆ ಅನುಮೋದನೆ ನೀಡಲು ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ 06–11–2013ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ.

**ಃ ಮುಂದೂಡಿದೆ ಃ**

**02] ವಿಷಯ ಸಂಖ್ಯೆಃ ಬೃ.ಸಾ.ಕಾ.ಸ್ಥಾ.ಸ: 104/2013–14**

ವಿಶೇಷ ಆಯುಕ್ತರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೆ: ಟೆರ್ರಾ ಫರ್ಮಾ ಬಯೋಟೆಕ್ನಾಲಜಿ ಸಂಸ್ಥೆಯವರು ಮಾನ್ಯ ಆಯುಕ್ತರಿಗೆ ದಿನಾಂಕಃ 15–06–2011ರಂದು ಪತ್ರ ಬರೆದು ಸದರಿ ಸಂಸ್ಥೆಯವರು ಗುಂಡಿಯಾ ಹಳ್ಳಿ ದೊಡ್ಡಬಳ್ಳಾಪುರ ತಾಲ್ಲೂಕಿನ ಹತ್ತಿರ ಘನ ತ್ಯಾಜ್ಯ ವಸ್ತು ನಿರ್ವಹಣೆಯ ಘಟಕವನ್ನು ಸ್ಥಾಪಿಸಿದ್ದು ಪಾಲಿಕೆಯಿಂದ ಸರಬರಾಜಾಗುವ ಘನತ್ಯಾಜ್ಯದ ನಿರ್ವಹಣೆಯನ್ನು ಕೈಗೊಳ್ಳಲಾಗಿರುತ್ತದೆ. ಸದರಿ ನಿರ್ವಹಣೆಯಲ್ಲಿ ಲಭ್ಯವಾಗುವ ಪ್ಲಾಸ್ಟಿಕ್‌ಅನ್ನು ಲ್ಯಾಂಡ್ ಫಿಲ್ ಮಾಡಲು ಬರದೇ ಇರುವುದರಿಂದ ಲಭ್ಯವಾಗುವ ಪ್ಲಾಸ್ಟಿಕ ಅನ್ನು ರೋಡ್ ಪಾಲಿಮಾರ್ ಪ್ಲಾಸ್ಟಿಕ್ ಬಿಟುಮಿನಸ್ ಆಗಿ ಉಪಯೋಗಿಸಲು ಕೇಂದ್ರಿಯ ಪರಿಸರ ಸಂರಕ್ಷಣಾ ಸಂಸ್ಥೆಯವರು ನೀಡಿರುವ ಮಾರ್ಗಸೂಚಿಯಲ್ಲಿ ಅಡಕವಾಗಿರುತ್ತದೆ.

ಮೆ: ಟೆರ್ರಾ ಫರ್ಮಾ ಬಯೋಟೆಕ್ನಾಲಜಿಸ್ ಸಂಸ್ಥೆಯವರು ಪತ್ರದಲ್ಲಿ ತಿಳಿಸಿರುವಂತೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಸಂಸ್ಥೆಯವರು ದಿನಾಂಕಃ 21–10–2010ರ ಸಭೆಯಲ್ಲಿ ತಿಳಿಸಿರುವಂತೆ ಸದರಿ ಘಟಕದಲ್ಲಿ ಉತ್ಪಾದನೆಯಾಗುವ ಪ್ಲಾಸ್ಟಿಕ್ ಅನ್ನು ರೋಡ್ ಪ್ಲಾಸ್ಟಿಕ್‌ಆಗಿ ಉಪಯೋಗಿಸಲಾಗುತ್ತದೆಂದು ಸದರಿ ಸಭೆಯಲ್ಲಿ ಪಾಲಿಕೆ ಪರವಾಗಿ ಆಶ್ವಾಸನೆ ನೀಡಲಾಗಿರುತ್ತದೆ ಎಂದು ತಿಳಿಸುತ್ತಾ ಘಟಕದಲ್ಲಿ ಉತ್ಪಾದನೆಯಾಗುವ ಪ್ಲಾಸ್ಟಿಕ್ ಅನ್ನು ಪಾಲಿಕೆಯಿಂದ ಬಳಸಿಕೊಳ್ಳಲು ಸದರಿ ಸಂಸ್ಥೆಯವರು ಕೋರುತ್ತಾ ಈಗಾಗಲೇ ಪಾಲಿಕೆಯಲ್ಲಿ ಸರಬರಾಜು ಮಾಡುತ್ತಿರುವ ಬ್ಲೆಂಡೆಂಡ್ ವೇಸ್ಟ್ ಪ್ಲಾಸ್ಟಿಕ್‌ಗೆ ನಿಗದಿಪಡಿಸಿದ ದರಗಳಿಗೆ ಶೇಕಡ 5ರಷ್ಟು ರಿಯಾಯಿತಿ ನೀಡಿ ಸರಬರಾಜು ಮಾಡುವುದಾಗಿ ಪತ್ರದಲ್ಲಿ ತಿಳಿಸಿರುತ್ತಾರೆ.

ಮೆ: ಟೆರ್ರಾ ಫರ್ಮಾ ಬಯೋಟೆಕ್ನಾಲಜಿಸ್ ಸಂಸ್ಥೆಯವರು ಕೋರಿರುವ ಪತ್ರವನ್ನು ಕೂಲಂಕಷವಾಗಿ ಪರಿಶೀಲಿಸಿ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ವ.ನಿ) ವಿಭಾಗರವರು ಸದರಿ ಘಟಕದಲ್ಲಿ ಲಭ್ಯವಾಗುವ ಪ್ಲಾಸ್ಟಿಕ್ ಅನ್ನು ರೋಡ್ ಪ್ಲಾಸ್ಟಿಕ್ ಆಗಿ ಉಪಯೋಗಿಸಲು ಮತ್ತು ಅದನ್ನು ಖರೀದಿಸಲು ಆದೇಶ ಕೋರಿ ಮುಖ್ಯ ಅಭಿಯಂತರರ ಶಿಫಾರಸ್ಸಿನೊಂದಿಗೆ ಮಾನ್ಯ ಆಯುಕ್ತರಿಗೆ ಸಲ್ಲಿಸಲಾಗಿತ್ತು. ಮಾನ್ಯ ಆಯುಕ್ತರವರು ಸದರಿ ಪ್ರಸ್ತಾವನೆಗೆ ಅನುಮೋದನೆ ನೀಡಿರುತ್ತಾರೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಬ್ಲೆಂಡೆಡ್ ವೇಸ್ಟ್ ಪ್ಲಾಸ್ಟಿಕ್‌ಅನ್ನು ಪಾಲಿಕೆಯ ವ್ಯಾಪ್ತಿಯಲ್ಲಿ ಕೈಗೊಳ್ಳುವ ಡಾಂಬರೀಕರಣದ ಡಾಂಬರು ಮಿಶ್ರಣದಲ್ಲಿ ಉಪಯೋಗಿಸಲು ತೆರೆದ ಟೆಂಡರ್ ಕರೆಯುವ ಬಗ್ಗೆ ಕಾನೂನು ಕೋಶದ ಅಭಿಪ್ರಾಯ ಕೋರಲಾಗಿ. ಮೆ: ಕೆ.ಕೆ. ಪ್ಲಾಸ್ಟಿಕ್ ವೇಸ್ಟ್ ಮ್ಯಾನೇಜ್‌ಮೆಂಟ್ ಪ್ರೈ.ಲಿ. ರವರು ಬ್ಲೆಂಡೆಡ್ ವೇಸ್ಟ್ ಪ್ಲಾಸ್ಟಿಕ್‌ನ ತಾಂತ್ರಿಕತೆಗೆ ಪೇಟೆಂಟ್ ಪಡೆದಿದ್ದು, ರಸ್ತೆ ನಿರ್ಮಿಸುವ ಕಾಮಗಾರಿಯಲ್ಲಿ ಪ್ಲಾಸ್ಟಿಕ್ ಡಾಂಬರು ಮಿಶ್ರಣದಲ್ಲಿ ಉಪಯೋಗಿಸುವ ಬಗ್ಗೆ ಟೆಂಡರ್ ಆಹ್ವಾನಿಸಲು ಕಾನೂನಿನ ಅಡಿಯಲ್ಲಿ ಯಾವುದೇ ಅವಕಾಶ ಕಂಡುಬಂದಿರುವುದಿಲ್ಲವೆಂದು ಕಾನೂನು ಕೋಶದ ಮುಖ್ಯಸ್ಥರ ಅಭಿಪ್ರಾಯ ಪಡೆಯಲಾಗಿದ್ದು ಮತ್ತು ಈ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕಃ 29–05–2010 ರಂದು ನಡೆದ ಬೃ.ಬೆಂ.ಮ.ಪಾಲಿಕೆಯ ಸಭೆಯ ವಿಷಯ ಸಂಖ್ಯೆ: 10(32)/2010–11ರಂದು ಒಪ್ಪಿಗೆ ನೀಡಲಾಗಿದೆ.

ಈಗಾಗಲೇ ಬ್ಲೆಂಡೆಡ್ ವೇಸ್ಟ್ ಪ್ಲಾಸ್ಟಿಕ್ ಅನ್ನು ರಸ್ತೆ ಕಾಮಗಾರಿಗೆ ಉಪಯೋಗಿಸಲು ಮೆ: ಕೆ.ಕೆ.ಪ್ಲಾಸ್ಟಿಕ್ ವೇಸ್ಟ್ ಮ್ಯಾನೇಜ್‌ಮೆಂಟ್ ಪ್ರೈ.ಲಿ. ರವರಿಗೆ ಒಡಂಬಡಿಕೆ ಆಧಾರದಂತೆ ಕರಾರನ್ನು ಮಾಡಿಕೊಂಡಿದ್ದು ದಿನಾಂಕಃ 06–12–2011 ರವರೆಗೆ

ಚಾಲ್ತಿಯಲ್ಲಿರುತ್ತದೆ ಮತ್ತು ಸದರಿಯವರ ಕೋರಿಕೆಯಂತೆ ಕರಾರನ್ನು ಮುಂದಿನ ಎರಡು ವರ್ಷಗಳವರೆಗೆ (ದಿನಾಂಕ: 07-12-2011 ರಿಂದ 06-12-2013ರವರೆಗೆ) ವಿಸ್ತರಿಸಲು ಮಾನ್ಯ ಆಯುಕ್ತರು ಅನುಮೋದನೆ ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ ಮೆ: ಟೆರ್ರಾ ಫರ್ಮಾ ಬಯೋಟೆಕ್ನಾಲಜಿಸ್ ಸಂಸ್ಥೆಯವರು ಕೋರಿರುವಂತೆ ತಮ್ಮ ಘಟಕದಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣೆಯಲ್ಲಿ ಲಭ್ಯವಾಗುವ ಪ್ಲಾಸ್ಟಿಕ್ ಅನ್ನು ಪಾಲಿಕೆಯವರು ಖರೀದಿಸುವ ಬಗ್ಗೆ ಮತ್ತು ಈಗಾಗಲೇ ಮೆ: ಕೆ.ಕೆ.ಪ್ಲಾಸ್ಟಿಕ್ ವೇಸ್ಟ್ ಮ್ಯಾನೇಜ್‌ಮೆಂಟ್ ಪ್ರೈ.ಲಿ. ರವರು ಪಾಲಿಕೆಗೆ ಸರಬರಾಜು ಮಾಡುತ್ತಿರುವ ಬ್ಲೆಂಡೆಡ್ ವೇಸ್ಟ್ ಪ್ಲಾಸ್ಟಿಕ್ ಕರಾರನ್ನು ವಿಸ್ತರಿಸಿರುವ ಬಗ್ಗೆ ಕಾನೂನು ಕೋಶದ ಅಭಿಪ್ರಾಯ ಪಡೆದಿದ್ದು, ಕಾನೂನು ಕೋಶದವರು ನೀಡಿರುವ ವರದಿಯಂತೆ ಬ್ಲೆಂಡೆಡ್ ಪ್ಲಾಸ್ಟಿಕ್ ವೇಸ್ಟ್‌ಅನ್ನು ರಸ್ತೆ ಕಾಮಗಾರಿಗಳಿಗೆ ಉಪಯೋಗಿಸುತ್ತಿದ್ದು, ಮೆ: ಕೆ.ಕೆ.ಪ್ಲಾಸ್ಟಿಕ್ ವೇಸ್ಟ್ ಏಕೈಕ ಸಂಸ್ಥೆಯಿಂದ ಪಾಲಿಕೆ ಸರಬರಾಜು ಪಡೆಯುತ್ತಿದ್ದು, ಮುಂದುವರಿದಂತೆ ಪಾಲಿಕೆಯ ಭೌಗೋಳಿಕ ವ್ಯಾಪ್ತಿಯು ಹೆಚ್ಚಾಗಿದ್ದು ಪ್ಲಾಸ್ಟಿಕ್ ಬೇಡಿಕೆಯು ಸಹ ಹೆಚ್ಚಾಗಿರುವ ಹಿನ್ನಲೆಯಲ್ಲಿ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಭೆಯಲ್ಲಿ ಮಾನ್ಯ ಆಯುಕ್ತರು ಹಾಗೂ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಒಪ್ಪಿಗೆ ನೀಡಿರುವಂತೆ ಹಾಲಿ ಬ್ಲೆಂಡೆಡ್ ಪ್ಲಾಸ್ಟಿಕ್ ವೇಸ್ಟ್ ಸರಬರಾಜು ಮಾಡುತ್ತಿರುವ ಮೆ: ಕೆ.ಕೆ. ಪ್ಲಾಸ್ಟಿಕ್ ಸಂಸ್ಥೆಯವರು ಮಾಡಿಕೊಂಡಿರುವ ಒಡಂಬಡಿಕೆ ದಿನಾಂಕಃ 06-12-2013ರಂದು ಮುಕ್ತಾಯಗೊಂಡಿರುತ್ತದೆ. ಈ ಹಿನ್ನಲೆಯಲ್ಲಿ ಮೆ: ಟೆರ್ರಾ ಫಾರ್ಮಾ ಬಯೋಟೆಕ್ನಾಲಜಿಸ್.ಲಿ., ರವರು ಹಾಲಿ ದರಗಳಿಗೆ ಶೇಕಡ 5 ರಷ್ಟು ರಿಯಾಯಿತಿ ದರಗಳಲ್ಲಿ ಅಂದರೆ ರೂ. 25.65/ ಕೆ.ಜಿ. ಗೆ ಸದರಿ ವೇಸ್ಟ್ ಪ್ಲಾಸ್ಟಿಕ್ ಮಾಡಿಫಯರ್ ( ಐಆರ್‌ಸಿ ಎಸ್‌ಪಿ 53/1996ಗೆ ಅನುಗುಣವಾಗಿ) ಅನ್ನು ನೇರವಾಗಿ ಹಾಟ್ ಮಿಕ್ಸ್ ಪ್ಲಾಂಟ್ ಸ್ಥಳಕ್ಕೆ ಸರಬರಾಜು ಮಾಡಲಾಗುವುದು ಎಂದು ಗುತ್ತಿಗೆದಾರರು ಒಪ್ಪಿಗೆ ಪತ್ರ ನೀಡಿರುತ್ತಾರೆ. ಮುಂದುವರಿದಂತೆ, ಈಗಾಗಲೇ ಐಆರ್‌ಸಿ ನಿಯಮಾವಳಿಯಂತೆ ಈ ರೀತಿಯ ಬ್ಲೆಂಡೆಡ್ ಪ್ಲಾಸ್ಟಿಕ್ ವೇಸ್ಟ್‌ಅನ್ನು ರಸ್ತೆಯ ಮೇಲ್ಪದರದಲ್ಲಿ ಬಳಸುವುದರಿಂದ ಗುಣಮಟ್ಟ ಹಾಗೂ ಬಾಳಿಕೆ ಹೆಚ್ಚಾಗುವ ಬಗ್ಗೆ ದೃಢೀಕರಿಸಲಾಗಿದೆ.

ಮುಂದುವರಿದಂತೆ, ಮುಖ್ಯ ಅಭಿಯಂತರರು (ರಸ್ತೆ ಮೂಲಭೂತ ಸೌಕರ್ಯ) ರವರು ಮೆ: ಟೆರ್ರಾ ಫರ್ಮಾ ಬಯೋಟೆಕ್ನಾಲಜಿಸ್ ಸಂಸ್ಥೆಯವರು ವೇಸ್ಟ್ ಪ್ಲಾಸ್ಟಿಕ್ ಡಾಂಬರು ಕಾಮಗಾರಿಗೆ ಸರಬರಾಜು ಮಾಡಲು ಒಪ್ಪಿರುವ ಬಗ್ಗೆ ಈ ಸಂಸ್ಥೆಯವರು ಡಾಂಬರು ಮಿಶ್ರಣಕ್ಕೆ ಶೇಕಡ 8 ರಷ್ಟು ಬ್ಲೆಂಡೆಡ್ ಪ್ಲಾಸ್ಟಿಕ್‌ಅನ್ನು ಮಿಶ್ರಣ ಮಾಡಲು ಬೇಕಾಗುವ ಸಲಕರಣೆ, ಯಂತ್ರೋಪಕರಣ ಮತ್ತು ಪ್ರೊಸೆಸಿಂಗ್ ಯುನಿಟ್ ಹೊಂದಿದ್ದಾರೆ ಎಂಬ ಬಗ್ಗೆ ಖಾತರಿಪಡಿಸಿಕೊಳ್ಳಲು ಕೋರಿದ್ದು, ಕಡತವನ್ನು ಪರಿಶೀಲಿಸಿದಾಗ ಮೆ: ಟೆರ್ರಾ ಫರ್ಮಾ ಬಯೋಟೆಕ್ನಾಲಜಿಸ್ ಸಂಸ್ಥೆಯವರು ದಿನಾಂಕಃ 15-06-2011ರಂದು ಹಿಂದಿನ ಆಯುಕ್ತರು ರವರಿಗೆ ಪತ್ರ ಬರೆದು ರಸ್ತೆಗೆ ಪ್ಲಾಸ್ಟಿಕ್ ಯೂಸೇಜ್ ಬಗ್ಗೆ ವಿವರಿಸಿ ಮತ್ತು ಹಿಂದಿನ ಆಯುಕ್ತರವರು ಸದರಿ MWS ಯುನಿಟ್‌ಗೆ ಭೇಟಿ ನೀಡಿರುವ ಬಗ್ಗೆ ತಿಳಿಸಿದ್ದು ಮತ್ತು ಸದರಿ ಯುನಿಟ್‌ಗೆ ಸಂಬಂಧಿಸಿದಂತೆ ಪ್ರೊಸೆಸಿಂಗ್ ಯುನಿಟ್‌ನ ಸಲಕರಣೆಗಳು ಮತ್ತು ಯಂತ್ರೋಪಕರಣಗಳ ಲಭ್ಯತೆ ಬಗ್ಗೆ ಅಧೀಕ್ಷಕ ಅಭಿಯಂತರರು (ರಸ್ತೆ ಮೂಲಭೂತ ಸೌಕರ್ಯ) ರವರು ದೃಢೀಕರಿಸಿದ್ದು, ಸದರಿ ಪ್ರಸ್ತಾವನೆಗೆ ಮಾನ್ಯ ಆಯುಕ್ತರವರು ಅನುಮೋದನೆ ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ **(1) ಡಾಂಬರು ಕಾಮಗಾರಿ ಮೇಲ್ಪದರದಲ್ಲಿ ಬ್ಲೆಂಡೆಡ್ ವೇಸ್ಟ್ ಪ್ಲಾಸ್ಟಿಕ್‌ಅನ್ನು ಉಪಯೋಗಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಮೆ: ಟೆರ್ರಾ ಫರ್ಮಾ ಬಯೋಟೆಕ್ನಾಲಜಿಸ್ ಸಂಸ್ಥೆಯವರೊಂದಿಗೆ ಬ್ಲೆಂಡೆಡ್ ವೇಸ್ಟ್ ಪ್ಲಾಸ್ಟಿಕ್‌ನ ಸರಬರಾಜು ದರವಾದ ರೂ. 25.65/ ಕೆ.ಜಿ. ಗೆ ಸದರಿ ಬ್ಲೆಂಡೆಡ್ ವೇಸ್ಟ್ ಪ್ಲಾಸ್ಟಿಕ್ ಅನ್ನು ಮೆ: ಟೆರ್ರಾ ಫರ್ಮಾ ಬಯೋಟೆಕ್ನಾಲಜಿಸ್ ಸಂಸ್ಥೆಯವರಿಂದ ಖರೀದಿಸಲು ಅನುಮೋದನೆ (2) ಮೆ: ಟೆರ್ರಾ ಫರ್ಮಾ ಬಯೋಟೆಕ್ನಾಲಜಿಸ್ ಸಂಸ್ಥೆಯವರು ಸರಬರಾಜು ಮಾಡುವ ಬ್ಲೆಂಡೆಡ್ ವೇಸ್ಟ್ ಪ್ಲಾಸ್ಟಿಕ್‌ಅನ್ನು ನೇರವಾಗಿ ಹಾಟ್ ಮಿಕ್ಸ್ ಪ್ಲಾಂಟ್‌ಗೆ ಸರಬರಾಜು ಮಾಡುವುದು ಮತ್ತು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸರಬರಾಜು ಮಾಡಲು ಮೆ: ಟೆರ್ರಾ ಫರ್ಮಾ ಬಯೋಟೆಕ್ನಾಲಜಿಸ್ ಸಂಸ್ಥೆಯವರಿಂದ ಒಂದು ವರ್ಷಕ್ಕೆ ಒಡಂಬಡಿಕೆಯನ್ನು ಮಾಡಿಕೊಳ್ಳಲು ಅನುಮೋದನೆ ಕೋರಿ** ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ28-01-2014ರ ವಿಶೇಷ ಆಯುಕ್ತರು(ಯೋಜನೆ) ರವರ ಟಿಪ್ಪಣಿ.

**: ಮುಂದೂಡಿದೆ :**

**<u>03] ವಿಷಯ ಸಂಖ್ಯೆಃ ಬೃ.ಸಾ.ಕಾ.ಸ್ಥಾ.ಸ: 107/2013-14</u>**

ವಿಶೇಷ ಆಯುಕ್ತರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, Palmtree Place Apartment Owner's Association ಮತ್ತು Franciscan Servants of Mary (Assisi Nilaya Palm Grove Road) ಸಂಸ್ಥೆಯವರು ದಿನಾಂಕಃ 09-10-2012ರಂದು ಮಾನ್ಯ ಆಯುಕ್ತರಿಗೆ ಅರ್ಜಿ ಸಲ್ಲಿಸಿ ಕೋರಮಂಗಲ ವ್ಯಾಲಿ ಕೆ-103 ಸೆಕೆಂಡರಿ ಡ್ರೈನ್‌ನ ಮೇಲೆ Palmtree Place Apartment ನ ಮುಂದೆ ಪಾಲಿಕೆಯ ಅನುಮತಿಯೊಂದಿಗೆ ಕವರಿಂಗ್ ಸ್ಲ್ಯಾಬ್‌ನಿಂದ ಮುಚ್ಚಲಾಗಿದೆ. ಆದರೆ ಪಕ್ಕದಲ್ಲಿರುವ Assisi Nilaya Palm Grove Road ಮುಂದೆ 15 ಅಡಿ ತೆರೆದ ಡ್ರೈನ್‌ಅನ್ನು ಕವರಿಂಗ್ ಸ್ಲ್ಯಾಬ್‌ನಿಂದ ಮುಚ್ಚಲು ಅವರ ಸ್ವಂತ ಖರ್ಚಿನಲ್ಲಿ ನಿರ್ಮಿಸಲು ಅನುಮತಿ ನೀಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ಇದೊಂದು ಸೆಕೆಂಡರಿ ಡ್ರೈನ್ (ಕೆ-103) ಆಗಿದ್ದು, ಕೋರಮಂಗಲ ವ್ಯಾಲಿಗೆ ಸೇರಿದ್ದಾರುತ್ತದೆ. ಈಗಾಗಲೇ ಪಾಲಿಕೆಯವತಿಯಿಂದ ಆಯುಕ್ತರ ಆದೇಶ ಸಂಖ್ಯೆಃ ಪಿಎಸ್‌ಆರ್(ಜಿ)/4764/07-08 ದಿನಾಂಕಃ 17-12-2007ರಲ್ಲಿ ಪಾಮ್ ಟ್ರೀ

ಪ್ಯಾಲೇಸ್ ಅಪಾರ್ಟ್‌ಮೆಂಡ್ ಮುಂದೆ ಈ ಮಳೆ ನೀರು ಚರಂಡಿಗೆ ಅನುಮತಿ ಪಡೆದು ಕವರಿಂಗ್ ಸ್ಲ್ಯಾಬ್ ನಿರ್ಮಿಸಲಾಗಿದೆ. ಇದರ ಪಕ್ಕದಲ್ಲಿ Assisi Nilaya ದ ಹಾಸ್ಟಲ್ ಮುಂದೆ 7.4 ಮೀಟ್ ಉದ್ದಕ್ಕೆ ತೆರೆದ ಚರಂಡಿ ಇದ್ದು, ಕವರಿಂಗ್ ಸ್ಲ್ಯಾಬ್ ನಿರ್ಮಿಸಿದರೆ ಅನುಕೂಲವಾಗುವುದಾಗಿ ಮನವಿಯಲ್ಲಿ ತಿಳಿಸಿರುತ್ತಾರೆ. Palmtree Place Apartment Owner's Association ಮತ್ತು Franciscan Servants of Mary (Assisi Nilaya Palm Grove Road ಸಂಸ್ಥೆಯವರು ಈ ಬಗ್ಗೆ ಡಿಸೈನ್ ಹಾಗೂ ಡ್ರಾಯಿಂಗ್ ಒದಗಿಸಿರುತ್ತಾರೆ. ಇವರಿಗೆ ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಅನುಮತಿ ನೀಡುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಮಂಡಿಸಿದೆ.

ಸ್ವತ್ತಿನ ಮಾಲೀಕರಾದ Palmtree Place Apartment Owner's Association ಮತ್ತು Franciscan Servants of Mary (Assisi Nilaya Palm Grove Road ಸಂಸ್ಥೆಯವರು ತಮ್ಮ ಸ್ವಂತ ಖರ್ಚಿನಲ್ಲಿ ಮಳೆ ನೀರು ಚರಂಡಿಯ ಮೇಲೆ ಕವರಿಂಗ್ ಸ್ಲ್ಯಾಬ್ ನಿರ್ಮಿಸುವುದು.

1. ಸದರಿ ಕಾಲುವೆಯನ್ನು ಮಾರ್ಪಾಡು ಮಾಡುವಾಗ ಪಾಲಿಕೆ ಅಭಿಯಂತರರ ಮೇಲ್ವಿಚಾರಣೆಯಲ್ಲಿ ಕಾಮಗಾರಿ ನಿರ್ಮಿಸುವುದು.
2. ಪಾಲಿಕೆವತಿಯಿಂದ ನೀಡಿದ ವಿನ್ಯಾಸದ ಪ್ರಕಾರ ಅಥವಾ ವಿನ್ಯಾಸವನ್ನು ಅನುಮೋದಿಸಿಕೊಂಡು ಕಾಮಗಾರಿ ನಿರ್ವಹಿಸುವುದು,
3. ನಿರ್ಮಾಣಕ್ಕೆ ವೆಚ್ಚವನ್ನು ಮತ್ತು ನಂತರದ ದುರಸ್ಥಿ ಮತ್ತು ನಿರ್ವಹಣೆ ವೆಚ್ಚವನ್ನು ತಾವೇ ಭರಿಸುವುದು.
4. ನಿರ್ಮಾಣ ಸಮಯದಲ್ಲಿ ಮುನ್ನೆಚ್ಚರಿಕೆ ಕ್ರಮವಹಿಸುವುದು. ಹಾಗೂ ಯಾವುದೇ ತರಹದ ಅವಘಡ ಸಂಭವಿಸಿದಲ್ಲಿ ಅದಕ್ಕೆ ನೀವೇ ನೇರ ಜವಾಬ್ದಾರರಾಗೀರುತ್ತೀರಿ ಹಾಗೂ ಪಾಲಿಕೆವತಿಯಿಂದ ಯಾವುದೇ ಆರ್ಥಿಕ ವೆಚ್ಚ ಭರಿಸುವುದಿಲ್ಲ.
5. ಸದರಿ ಚರಂಡಿಗೆ ಕವರಿಂಗ್ ಸ್ಲ್ಯಾಬ್ ನಿರ್ಮಾಣದ ನಂತರ ಈ ಭಾಗವನ್ನು ಬೇರೆ ಯಾವುದೇ ತರಹದ ಚಟುವಟಿಕೆಗಳನ್ನಾಗಲೀ ಅಥವಾ ಬೇರೆ ಯಾವುದೇ ಉದ್ದೇಶಕ್ಕೆ ಪರಭಾರೆ ಮಾಡುವುದನ್ನು ನಿಷೇಧಿಸಲಾಗಿರುತ್ತದೆ.
6. ನಿರ್ವಹಣೆ ದೃಷ್ಟಿಯಿಂದ ಪ್ರತಿ 5 ಮೀಟರ್ ಅಂತರದಲ್ಲಿ ಮೋರಿಯ ಅಗಲಕ್ಕೆ 1 ಮೀಡರ್ ಉದ್ದದ ರಂಧ್ರ ನಿರ್ಮಿಸಬೇಕೆ( ತೆಗೆದು ಮುಚ್ಚು ವ್ಯವಸ್ಥೆ ಇರಬೇಕು)
7. ಪಾಲಿಕೆಯ ಪರಿವೀಕ್ಷಣೆಯೊಂದಿಗೆ, ಅನುಮತಿಸಿದ ಭಾಗದ ಚರಂಡಿಯನ್ನು ನಿರಂತರವಾಗಿ ನಿಮ್ಮ ಸ್ವಂತ ವೆಚ್ಚದಲ್ಲಿ ಸ್ವಚ್ಛಗೊಳಿಸಿ ನಿರ್ವಹಣೆಯನ್ನು ಕನಿಷ್ಠ ಪಕ್ಷ 6 ತಿಂಗಳಿಗೊಮ್ಮೆ ಮಾಡತಕ್ಕದ್ದು, ಮಳೆ ನೀರಿನ ಸ್ವಾಭಾವಿಕ ಹರಿವಿಗೆ ಅಡೆತಡೆ ಇಲ್ಲದಂತೆ ನೋಡಿಕೊಳ್ಳತಕ್ಕದ್ದು. (ದಾಖಲೆಯನ್ನು ಪಾಲಿಕೆಗೆ ಸಲ್ಲಿಸಬೇಕು)
8. ಕಾಮಗಾರಿ ಮುಗಿದ ನಂತರ ಸದರಿ ರಾಜಕಾಲುವೆ ಮೇಲೆ ಪಾಲಿಕೆಯ ಅನುಮತಿ ಇಲ್ಲದೆ ಯಾವುದೇ ತರಹದ ಖಾಸಗಿ/ ವಾಣಿಜ್ಯ ವ್ಯವಹಾರಗಳನ್ನು ನಡೆಸತಕ್ಕದ್ದಲ್ಲ.
9. ಮುಂದಿನ ದಿನಗಳಲ್ಲಿ ಮಹಾನಗರ ಪಾಲಿಕೆಯಿಂದ ರಸ್ತೆ ಅಗಲೀಕರಣ ಅಥವಾ ಬೇರೆ ಯಾವುದೇ ಸಾರ್ವಜನಿಕ ಉದ್ದೇಶಿತ ಕಾಮಗಾರಿಗಳನ್ನು ಕೈಗೊಳ್ಳಬೇಕಾದ ಸಂದರ್ಭಬಂದಲ್ಲಿ ಯಾವುದೇ ರೀತಿಯ ನೋಟಿಸ್ ನೀಡದೇ ಸದರಿ ನಿರ್ಮಾಣದ ಕವರಿಂಗ್ ಸ್ಲ್ಯಾಬ್‌ಗಳನ್ನು ತೆರುವುಗೊಳಿಸುವುದಾಗಲಿ, ಅಥವಾ ಮಾರ್ಪಾಡು ಮಾಡಬಹುದಾದ ಅಧಿಕಾರವನ್ನು ಮಹಾನಗರ ಪಾಲಿಕೆ ಹೊಂದಿರುತ್ತದೆ.
10. ಸದರಿ ಚರಂಡಿಯ ಭಾಗ ಹಾಗೂ ತಾವು ನಿರ್ಮಿಸಲಿರುವ ಕವರಿಂಗ್ ಸ್ಲ್ಯಾಬ್ ಸಹ ಮಹಾನಗರ ಪಾಲಿಕೆಯ ಆಸ್ತಿ ಆಗಿರುತ್ತದೆ. ಇದರ ಮೇಲೆ ಯಾವುದೇ ರೀತಿ ಒತ್ತುವರಿ ಆಗದಂತೆ ನೋಡಿಕೊಳ್ಳತಕ್ಕದ್ದು.
11. ಮಳೆನೀರು ಚರಂಡಿಗೆ ನಿರ್ಮಿಸುವ ಕವರಿಂಗ್ ಸ್ಲ್ಯಾಬ್ ಪಾಲಿಕಯು ನೀಡುವ ವಿನ್ಯಾಸಕ್ಕೆ ಅನುಗುಣವಾಗಿ ಚರಂಡಿಯ ಮೂಲಪಥ ಹಾಗೂ ಮೂಲ ವಿಸ್ತೀರ್ಣಕ್ಕೆ ಧಕ್ಕೆಯಾಗದಂತೆ ನಿರ್ಮಿಸತಕ್ಕದ್ದು, ಹಾಗೂ ನೀರಿನ ಸುಗಮ ಹರಿವಿಗೆ ತೊಂದರೆಯಾಗದಮತೆ ಕಾಮಗಾರಿ ನಿರ್ವಹಿಸುವುದು.
12. ಸದರಿ ಮಳೆ ನೀರಿನ ಚರಂಡಿಯ ಮೇಲೆ ಬೃಹತ್ ನೀರುಗಾಲುವೆ, ಬಿ.ಬಿ.ಎಂ.ಪಿ ಎಂಬ ನಾಮಫಲಕ ಪ್ರದರ್ಶಿಸತಕ್ಕದ್ದು.
13. ಕಾಮಗಾರಿ ನಿರ್ವಹಿಸುವ ಸಮಯದಲ್ಲಿ, ಕಾಮಗಾರಿ ನಂತರದಲ್ಲಿ ಪಾಲಿಕೆಯ ಚರಂಡಿಯ ಭದ್ರತೆ ಮತ್ತು ರಕ್ಷಣೆಗಾಗಿ ಸದರಿ ಆರ್.ಸಿ.ಸಿ. ಮುಚ್ಚಳಿಕೆ ಮೇಲೆ ಯಾವುದೇ ತರಹದ ವಾಹನ ಸಂಚಾರವನ್ನು ಕಡ್ಡಾಯವಾಗಿ ನಿಷೇದಿಸತಕ್ಕದ್ದು.
14. ಅನುಮತಿ ರದ್ದುಪಡಿಸುವ ಅಥವಾ ಬೇರೆಯಾವುದೇ ಬದಲಾವಣೆ ಮಾಡುವ ಅಧಿಕಾರವನ್ನು ಮಹಾನಗರ ಪಾಲಿಕೆ ಹೊಂದಿರುತ್ತದೆ.
15. ಕಾಮಗಾರಿ ನಿರ್ವಹಿಸುವ ಸಮಯದಲ್ಲಿ ಮಳೆ ನೀರಿನ ಚರಂಡಿಗೆ ಹಾಗೂ ಪಾಲಿಕೆ ಸ್ವತ್ತಿಗೆ ಹಾನಿಯಾಗದಂತೆ ನಿರ್ವಹಿಸುವುದು.
16. ಈ ಅನುಮತಿಗೆ ಒಂದು ವರ್ಷ ಕಾಲಾವಕಾಶ ನಿಗದಿಪಡಿಸಿದ್ದು ನಿರ್ದಿಷ್ಟ ಅವಧಿಯೊಳಗಾಗಿ ಕಾಮಗಾರಿಯನ್ನು ಪ್ರಾರಂಭಿಸಬೇಕು ಹಾಗೂ ಕಾಮಗಾರಿಯ ಪ್ರತಿ ವಿವರಗಳನ್ನು ಪಾಲಿಕೆಗೆ ಕಾಲಕಾಲಕ್ಕೆ ತಿಳಿಯಪಡಿಸುವುದು.
17. ಈ ಕಾರ್ಯವನ್ನು ಪಾಲಿಕೆಯ ಅಭಿಯಂತರರುಗಳ ಮೇಲುಸ್ತುವಾರಿಯಲ್ಲಿ ನಿರ್ವಹಿಸಲು ಹಾಗೂ ವಿನ್ಯಾಸವನ್ನು ನುರಿತ ತಂತ್ರಜ್ಞರಿಂದ ಪರೀಕ್ಷಿಸಿ ನಿರ್ಮಾಣವನ್ನು ಕೈಗೊಳ್ಳತಕ್ಕದ್ದು.

ಮೇಲ್ಕಂಡ ಷರತ್ತುಗಳೊಂದಿಗೆ ಸದರಿ ಸ್ವತ್ತಿನ ಮಾಲೀಕರು ಉದ್ದೇಶಿತ ಕಾಮಗಾರಿಯನ್ನು ಕೈಗೊಳ್ಳುವ ಪ್ರಸ್ತಾವನೆಗೆ ಅನುಮೋದನೆ ನೀಡಲು ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ 30–01–2014ರ ವಿಶೇಷ ಆಯುಕ್ತರು (ಯೋಜನೆ) ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕಃ 30–01–2014ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**04] ವಿಷಯ ಸಂಖ್ಯೆಃ ಬೃ.ಸಾ.ಕಾ.ಸ್ಥಾ.ಸ:/112 /2013–14**

ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, Remodelling of SWD secondary drain from pollution control board to carmel school in V-116 in Bhovi colony in ward No:100 ಕಾಮಗಾರಿಗೆ ರೂ. 92.00 ಲಕ್ಷಗಳಿಗೆ ಅಂದಾಜನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಪಡೆದು ಕಾಮಗಾರಿ ಸಂಕೇತವನ್ನು (100–12–00018) ಪಡೆಯಲಾಗಿರುತ್ತದೆ. ಅದರಂತೆ, ಮುಖ್ಯ ಅಭಿಯಂತರರು (ಬೃ.ಮ.ನೀ.ಗಾ) ರವರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜುರಾತಿ ನೀಡಿರುತ್ತಾರೆ.

ಈ ಕಾಮಗಾರಿಗೆ ಟೆಂಡರ್ ನೋಟಿಫಿಕೇಷನ್ ನಂಃ EE/SWD/West/TEND/23/2012-13 Dated: 09-01-2013 ದಿನಾಂಕದಂದು ಟೆಂಡರ್ ಆಹ್ವಾನಿಸಲಾಗಿತ್ತು (5th call) ಈ ಟೆಂಡರ್‌ನ ತಾಂತ್ರಿಕ ಬಿಡ್ಡ್‌ಅನ್ನು ದಿನಾಂಕಃ 12–02–2013ರಂದು ತೆರೆಯಲಾಗಿ ಒಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿರುತ್ತಾರೆ. ಈ ಗುತ್ತಿಗೆದಾರರ ತಾಂತ್ರಿಕ ಬಿಡ್‌ಗೆ ದಿನಾಂಕಃ 12–02–2012ರಂದು ಮುಖ್ಯ ಅಭಿಯಂತರರು ಬೃ.ನೀ.ಗಾ. ರವರಿಂದ ತಾಂತ್ರಿಕ ಬಿಡ್ಡಗೆ ಅನುಮೋದನೆ ಪಡೆದು ದಿನಾಂಕಃ 25–02–2012ರಂದು ಆರ್ಥಿಕ ಬಿಡ್ಡನ್ನು ತೆರೆಯಲಾಗಿದೆ.

ಆರ್ಥಿಕ ಬಿಡ್‌ನ ವಿವರಗಳು ಈ ಕೆಳಕಂಡಂತಿವೆ.

| ಕ್ರ. ಸಂ. | ಗುತ್ತಿಗೆದಾರರ ಹೆಸರು | ಕಾಮಗಾರಿಯ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಟೆಂಡರ್‌ಗಿಟ್ಟ ಮೊತ್ತ (ಮಂಜೂರಾದ ಅಂದಾಜು ಪಟ್ಟಿಯ ದರದಂತೆ) 2010–11ನೇ ಸಾಲಿನ ದರಪಟ್ಟಿಗೆ ರೂ. | ಗುತ್ತಿಗೆದಾರರು ನಮೂದಿಸಿರುವ ಮೊತ್ತ | ಅಂದಾಜು ಪಟ್ಟಿಯ (2010–11ನೇ ದರಪಟ್ಟಿಯ ದರಗಳಂತೆ) | 2013–14ನೇ ಸಾಲಿನ ದರಪಟ್ಟಿಯೊಂದಿಗೆ |
|---|---|---|---|---|---|---|
| 1 | ಶ್ರೀ.ಸುನಿಲ್ ಕುಮಾರ್.ಜಿ. | 92.00 | 9197140.18 | 10115075 | 9.98% ರಷ್ಟು ಹೆಚ್ಚು | 13.09% ರಷ್ಟು ಕಡಿಮೆ |

ಮೇಲ್ಕಂಡ ವಿವರಗಳನ್ನು ಪರಿಶೀಲಿಸಲಾಗಿ ಈ ಕಾಮಗಾರಿಗೆ ಶ್ರೀ. ಜಿ.ಸುನಿಲ್‌ಕುಮಾರ್ ರವರು ರೂ. 1,01,15,075.00ಗಳನ್ನು ನಮೂದಿಸಿದ್ದು, ಈ ಮೊತ್ತವು 2010–11ನೇ ಸಾಲಿನ ದರಪಟ್ಟಿಗೆ ಶೇಕಡ 9.98 ರಷ್ಟು ಹೆಚ್ಚಿಗೆ ಮತ್ತು ಎಸ್.ಆರ್. ದರ 2013–14ರ ನೊಂದಿಗೆ ಹೋಲಿಸಿದಾಗ ಶೇಕಡ 13.09 ಕಡಿಮೆ ಇರುತ್ತದೆ. ಈ ಕಾಮಗಾರಿಯ ಟೆಂಡರ್ 5ನೇ ಕರೆಯಾಗಿರುವುದರಿಂದ ಏಕಮೇವ ಟೆಂಡರ್‌ಅನ್ನು ಪರಿಗಣಿಸಿದೆ.

ಪ್ರಸ್ತಾಪಿಸಿರುವ ಕಾಮಗಾರಿಗೆ ಗುತ್ತಿಗೆದಾರರು ನಮೂದಿಸಿರುವ ಟೆಂಡರ್ ಮೊತ್ತ ರೂ. **1,01,15,075.00** (2010–11ನೇ ಸಾಲಿನ ದರಪಟ್ಟಿಗೆ ಶೇಕಡ 9.98ರಷ್ಟು ಹೆಚ್ಚಿಗೆ ಮತ್ತು ಎಸ್.ಆರ್. ದರ 2013–14ನೊಂದಿಗೆ ಹೋಲಿಸಿದಾಗ ಶೇಕಡ 13.09 ರಷ್ಟು ಕಡಿಮೆ)ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ 13–02–2014ರ ಆಯುಕ್ತರವರ ಟಿಪ್ಪಣಿ.

**: ಮುಂದೂಡಿದೆ :**

**05] ವಿಷಯ ಸಂಖ್ಯೆಃ ಬೃ.ಸಾ.ಕಾ.ಸ್ಥಾ.ಸ:/113 /2013–14**

ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಕೆಲವು ಪ್ರಮುಖ ರಸ್ತೆಗಳು ತೀವ್ರವಾಗಿ ಹದಗೆಟ್ಟಿದ್ದು ವಾಹನಗಳ ಸುಗಮ ಸಂಚಾರಕ್ಕೆ ಅತೀವ ಅಡಚಣೆ ಉಂಟಾಗುತ್ತಿದ್ದು, ರಸ್ತೆಗಳು

ಹಾಳಾಗಿರುವ ಬಗ್ಗೆ ಮಾಧ್ಯಮಗಳಲ್ಲಿ  ಟೀಕೆ ಟಿಪ್ಪಣಿಗಳು ಬರುತ್ತಿದ್ದು, ಈ ಬಗ್ಗೆ ಮಾನ್ಯ ಶಾಸಕರು/ ಪಾಲಿಕೆ ಸದಸ್ಯರುಗಳು ಕೆಳಕಂಡ ರಸ್ತೆಗಳನ್ನು ತುರ್ತಾಗಿ ದುರಸ್ಥಿಗೊಳಿಸಲು ಕೋರಿರುತ್ತಾರೆ. ಸದರಿ ರಸ್ತೆಗಳನ್ನು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ಪರಿವೀಕ್ಷಿಸಿದ್ದು, ರಸ್ತೆಗಳ ಮೇಲ್ಮೈ ಭಾಗವು ಹಾಳಾಗಿದ್ದು, ಗುಂಡಿಗಳಿಂದ ಕೂಡಿರುವುದರಿಂದ, ಶಿಥಿಲವಾಗುತ್ತಿರುವುದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗಿರುವುದನ್ನು ಗಮನಿಸಿ ಕೆಳಕಂಡ ರಸ್ತೆಗಳನ್ನು ಅಭಿವೃದ್ಧಿಗೊಳಿಸಿ,  ಮರು–ಡಾಂಬರೀಕರಣಗೊಳಿಸುವ ಸಲುವಾಗಿ ಅಂದಾಜು ಪಟ್ಟಿಯನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

| **ಕ್ರಮ ಸಂಖ್ಯೆ** | **ಕಾಮಗಾರಿಯ ಹೆಸರು** | **ಅಂದಾಜು ಮೊತ್ತ (ಕೋಟಿಗಳಲ್ಲಿ)** |
|---|---|---|
| 1 | Improvements and Asphalitng to Gottigere-Kengeri road from Bannerghatta road to Jambu savari Dinne in Bangalore South Constituency. | 4.00 |
| 2 | Improvements and Asphalitng to Kammanahalli road from Begur-Doddakammahalli road to NICE road in Bangalore South Constituency. | 1.2 |
| 3 | Improvements drain and footpath to Anjanapura main road from Avalahalli Tippu circle to Anjanapura circle in Bangalore South Constituency. | 0.8 |
| 4 | Improvements and Asphalitng to Kembattanahalli road from Bannerghatta road to Veeranjaneya swamy temple, Kembattahalli in Bangalore South Constituency. | 1.7 |
| 5 | Improvements drain and footpath to Kottanur mian road from Bannerghatta road to Jambu Savari dinne via B.K Circle in Banagalore South Constituency. | 1.5 |
| 6 | Improvements drain and footpath to Doddakammanahalli Main road from Bannerghatta road to Begur-Kammanahalli in Bangalore South Constituency | 1.80 |
| 7 | Comprehensive development of  Kempapura Canara Bank to Presidency College main road at ward No.7 Byatarayanapura | 1.00 |
| 8 | Comprehensive development of  Thindlu Circle to More junction main road near Virupakshapura at Ward No.9 Vidyaranyapura. | 1.00 |
| 9 | Comprehensive development of  Vidyaranyapura last bus stop to Yelahanka – Yeshwanthapura road in ward No.9 and 11. | 1.00 |
| 10 | Comprehensive development of Attur main road from Attur Lake to Annathapura main road. | 1.00 |
| 11 | Improvements and asphalting to road at Doddabidrakallu main road from rockline Studio to Thippenahalli in Doddabidrakallu, Ward no.40 of Herohalli sub-division-Balance Portion. | 1.50 |
| 12 | Improvements and asphalting to road Mahadeshwarnagar main road from Magadi main road from Magadi main road to Nagarahole Nagar in Herohalli, Ward No. 72 of Herohalli sub-division-Balance Portion. | 0.50 |
| 13 | Improvements and asphalting to Thunganagar main road from Magadi main road to Andrahalli main road (Herohalli) in Ward no.72 of Herohalli sub-division. | 1.00 |

| | | |
|---|---|---|
| 14 | Improvements and asphalting to Nagadevanahalli road from ring road to Doddagollarahalli in ward no.130 | 1.00 |
| 15 | Improvements and asphalting to Keerthi Bakery road from Kengeri ring road to Dubasipalya joining ring road via Windows Hospital road in ward No. 130. | 2.00 |
| 16 | Improvements and asphalting to Siddaganga Kalyanamantapa to University Mariyappanapalya in ward No.130 | 2.00 |
| 17 | Improvements and asphalting to Ullala main road from Nuggalipalya to Dwarakavasa road in ward No.72 | 1.00 |
| 18 | Improvements and asphalting to 6th main road from Mysore road flyover to Subhashnagar in ward No.159 | 1.00 |
| 19 | Improvements and asphalting to Doddabele main road from Mysore road to Doddabele in ward No.198 | 0.50 |
| 20 | Improvements and asphalting to road from Andrahalli circle to Hegganahalli main road in Doddabidarakallu in ward no.40 | 0.50 |
| 21 | Improvements and asphalting to Uttarahalli main road from Mysore road to Kenchenahalli main road junction-Balance portion. | 1.00 |
| 22 | Improvements and asphalting to Doddabasthi main road from Kenchanapura cross to Amma Ashram in ward no.130 | 2.00 |
| 23 | Improvements and asphalting to road from NH4 to Thippenahalli ward no.40 | 1.00 |
| 24 | Improvements and Asphalting to Dollars Colony road from ORR to Storm Water Drain in J.P Nagar 4th Phase. | 1.00 |
| 25 | Improvements to drain and footpath of 2nd main road from 32nd Cross road to Sangam Circle. | 1.35 |
| 26 | Improvements and Asphalting to 14th Cross road from 24th main road to Sindura Palace in J.P Nagar Ist Phase. | 1.75 |
| 27 | Improvements to drain and footpath of 45th cross (from Banashankari bus stop to Rajalakshmi Kalyana Mantapa. | 2.00 |
| 28 | Improvements and Asphalting to selected reaches of K.R road from Market Circle to Netkallappa Circle. | 1.00 |
| 29 | Improvements and Asphalting to Vidyapeeta circle to from ORR towards Vidyapeeta Circle. | 1.00 |
| 30 | Improvements and Asphalting to Diagonal road and B.P Wadia road from Lalbagh west gate to K.R Road. | 0.70 |
| 31 | Improvements and Asphalting to Nehru Road from 50ft road to SWD drain. | 0.80 |
| 32 | Improvements and Asphalting to Old Madras road from Benniganahalli Bridge upto BBMP limits (Remaining Reaches) | 4.50 |
| 33 | Improvements and Asphalting to road from New light Hotel to Vibhutipura to Join HAL main gate. | 4.00 |

| | | |
|---|---|---|
| 34 | Improvements and Asphalting to road joining Agara to Hennur main road via kalkere tank bunk bund. | 5.00 |
| 35 | Improvements and Asphalting to road from Kalkere main road to Raghavendra Circle. | 2.00 |
| 36 | Improvements and Asphalting to road from Ramamuirthynagar main road to Raghavendra circle cia Bhovi Calony. | 1.50 |
| 37 | Improvements and Asphalting to road from behind Ramamurthynagar police station to F.C.I railway underpass. | 3.00 |
| 38 | Improvements and Asphalting to LBS nagar main road. | 3.00 |
| 39 | Improvements and Asphalting to road from ORR to Mahadevapura main road. | 1.00 |
| 40 | Strenghtening and Asphalting to road cut portion of old madras road from Baiyappanhalli level crossing to Beneganhalli | 1.65 |
| | **Total** | **63.60** |

2013–14ನೇ ಸಾಲಿನ ಪಾಲಿಕೆಯ ಅನುಮೋದಿತ ಆಯವ್ಯಯದಲ್ಲಿ ಆರ್ಟೀರಿಯಲ್ ಮತ್ತು ಸಬ್–ಆರ್ಟೀರಿಯಲ್ ರಸ್ತೆ ಡಾಂಬರೀಕರಣ/ದುರಸ್ಥಿಗೆ ರೂ. **400.00** ಕೋಟಿ ಅನುದಾನವಿದ್ದು **(P-1732),** ಸದರಿ ಅನುದಾನದಡಿ ಮೇಲ್ಕಂಡ ಕಾಮಗಾರಿಗಳನ್ನು ನಿರ್ವಹಿಸಬಹುದಾಗಿರುತ್ತದೆ.

ಈ ಮೇರೆಗೆ ನಗರದ ಆಯ್ದ ರಸ್ತೆ ಡಾಂಬರೀಕರಣ/ದುರಸ್ಥಿಗೆ ಪಾಲಿಕೆಯ ಮತ್ತು ಸರ್ಕಾರದ ಒಟ್ಟು ಅನುದಾನದಲ್ಲಿ ಕೈಗೊಳ್ಳಲು ಮೇಲ್ಕಂಡ ಪಟ್ಟಿಗಳ ಕ್ರಿಯಾ ಯೋಜನೆಯ ಪ್ರತೀ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ, ಟೆಂಡರ್ ಅಹ್ವಾನಿಸಲು ಅನುಮೋದನೆ ಮತ್ತು ಕಾಮಗಾರಿ ಸಂಖ್ಯೆಯನ್ನು ನೀಡಲು ಅನುಮೋದನೆ ನೀಡಲು ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆ ಮುಂದೆ ಮಂಡಿಸಲಾದ ದಿನಾಂಕಃ15–02–2014ರ ಆಯುಕ್ತರು ರವರ ಟಿಪ್ಪಣಿ.

**ದಿನಾಂಕಃ 01–03–2014ರ ನಿರ್ಣಯ:– ಆಯುಕ್ತರವರ ದಿನಾಂಕಃ 15–02–2014ರ ಟಿಪ್ಪಣಿಯನ್ನು ಒಪ್ಪತ್ತಾ, ಸದರಿ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಮುಖಾಂತರ ನಿರ್ವಹಿಸುವಂತೆ ಹಾಗೂ ಕಾಮಗಾರಿಯಗಳ ಪಟ್ಟಿಯಲ್ಲಿ ನಮೂದಾಗಿರುವ ಕ್ರಮ ಸಂಖ್ಯೆಃ 1,32,33,34,37,38, ರಲ್ಲಿನ ಕಾಮಗಾರಿಗಳಿಗೆ ಕೌನ್ಸಿಲ್ ಸಭೆಯ ಅಗತ್ಯ ಅನುಮೋದನೆಗಳನ್ನು ಪಡೆಯುವಂತೆ ಸಮಿತಿಯು ತೀರ್ಮಾನಿಸಿತು.**

**06] ವಿಷಯ ಸಂಖ್ಯೆಃ ಬೃ.ಸಾ.ಕಾ.ಸ್ಥಾ.ಸ: 114/2013–14**

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, Construction of cultural stage at Northern side of Kittur rani Chennamma stadium in ward No:169 ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ದಕ್ಷಿಣ) ರವರು ಎರಡನೇ ಕರೆಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 ಟೆಂಡರ್‌ಗಳು ಸ್ವೀಕೃತವಾಗಿದ್ದು, 02 (ಎರಡು) ಟೆಂಡರ್‌ದಾರರು ತಾಂತ್ರಿಕ ಬಿಡ್‌ನಲ್ಲಿ ಸಿಂಧುವಾಗಿರುತ್ತದೆ. ಕಾರ್ಯಪಾಲಕ ಅಭಿಯಂತರರು (ದಕ್ಷಿಣ) ರವರು ಕನಿಷ್ಠ ಟೆಂಡರ್‌ದಾರರಾದ ಶ್ರೀ. ನಾದಂಪಲ್ಲಿ ದಾಮೋದರ್ ರಾಜು, ಗುತ್ತಿಗೆದಾರರ ಟೆಂಡರ್‌ಅನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ. 92.00 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2012–13ನೇ ಸಾಲಿನ ದರ ಪಟ್ಟಿಯ ಆಧಾರದ ಮೇಲೆ ಕಾರ್ಯಪಾಲಕ ಅಭಿಯಂತರರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ಸಂಬಂಧಪಟ್ಟವರಿಂದ ಪಡೆದು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆದಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊಬಲಗು ರೂ. 67,34,660.06ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ. ನಾದಂಪಲ್ಲಿ ದಾಮೋದಾರ್ ರಾಜು, ರವರು ರೂ. 76,10,372.76 ಗಳನ್ನು ನಮೂದಿಸಿದ್ದು, ಸದರಿ ಟೆಂಡರ್ ಮೊತ್ತವು ಶೇಕಡ 13 ರಷ್ಟು ಹೆಚ್ಚುವರಿ ದರಗಳನ್ನು ಟೆಂಡರ್‌ಗಿಟ್ಟ ಮೊತ್ತಕ್ಕೆ ನಮೂದಿಸಿದ್ದು, ಸದರಿ ದರಗಳನ್ನು ಚಾಲ್ತಿ ದರಪಟ್ಟಿ 2013–14ನೇ ಸಾಲಿಗೆ ಹೋಲಿಸಿದಾಗ ಶೇಕಡ 6.07 ರಷ್ಟು ಹೆಚ್ಚುವರಿ ದರಗಳು ಕಂಡು ಬಂದಿದ್ದು, ಕನಿಷ್ಠ ಟೆಂಡರ್‌ದಾರರಾಗಿರುತ್ತಾರೆ. ನಮೂದಿಸಿದ ದರಗಳು ಹೆಚ್ಚಾಗಿರುವುದು ಕಂಡುಬಂದು ಕಾರ್ಯಪಾಲಕ ಅಭಿಯಂತರರು ಸದರಿ ಗುತ್ತಿಗೆದಾರರನ್ನು ಸಂಧಾನಕ್ಕೆ ಕರೆಯಲಾಗಿ ಗುತ್ತಿಗೆದಾರರು ದಿನಾಂಕಃ 23–01–2014ರಂದು ಕಾರ್ಯಪಾಲಕ

ಅಭಿಯಂತರರನ್ನು ಭೇಟಿಯಾಗಿ ಪತ್ರ ನೀಡಿ ಪ್ರಸಕ್ತ ಸಾಲಿನಲ್ಲಿ ಸಿಮೆಂಟ್, ಸ್ಟೀಲ್ ಮತ್ತು ಇತರೇ ಸಾಮಾಗ್ರಿಗಳ ದರಗಳು ಹೆಚ್ಚಾಗಿರುವುದರಿಂದ ಹಾಗೂ ಕಾಮಗಾರಿಯು ಕಟ್ಟಡ ನಿರ್ಮಾಣ ಕಾಮಗಾರಿಯಾಗಿರುವುದರಿಂದ ಈಗಾಗಲೇ ಟೆಂಡರ್‌ನಲ್ಲಿ ನಮೂದಿಸಿರುವು ದರದಲ್ಲಿಯೇ ಕಾಮಗಾರಿ ನಿರ್ವಹಿಸಲು ಕೋರಿದ್ದು, ಟೆಂಡರ್‌ಗೆ ಅನಮೋದನೆ ನೀಡಲು ಕೋರಿರುತ್ತಾರೆ. ಗುತ್ತಿಗೆದಾರರ ಕೋರಿಕೆಯಂತೆ ಮುಖ್ಯ ಅಭಿಯಂತರರು (ದಕ್ಷಿಣ) ರವರು ಟೆಂಡರ್ ಅನುಮೋದನೆ ಕೊರಿ ಪ್ರಸ್ತಾವನೆ ಸಲ್ಲಸಿದ್ದು, ಮೇಲ್ಕಂಡ ಉಲ್ಲೇಖದಡಿಯಲ್ಲಿ ಮಾನ್ಯ ಆಯುಕ್ತರವರು ಅನುಮೋದನೆ ನೀಡಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ. 76,10,372.76 ಗಳಾಗಿದ್ದು ಸರ್ಕಾರದ ಆದೇಶ ಸಂಖ್ಯೆಃ ಯು.ಡಿ.ಡಿ./636/ಎಂಎನ್‌ವೈ/2010, ದಿನಾಂಕಃ 02–04–2011 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ ನಿಯಮಗಳು 1977 ನಿಯಮ 6ಕ್ಕೆ ಆರ್ಥಿಕ ಅಧಿಕಾರಿಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು ಇದರಂತೆ ಮಾನ್ಯ ಆಯುಕ್ತರವರು ನೀಡಿರುವ ಆರ್ಥಿಕ ಪ್ರತ್ಯಾಯೋಜನೆಯಂತೆ ಟೆಂಡರ್ ಅಂಗೀಕರಿಸುವ ಅಧಿಕಾರ ಮಾನ್ಯ ಆಯುಕ್ತರು / ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಕನಿಷ್ಠ ಟೆಂಡರ್ ಗುತ್ತಿಗೆದಾರರಾದ ಶ್ರೀ. ನಾದಂಪಲ್ಲಿ ದಾಮೋದರ್ ರಾಜು, ರವರು 2013–14ನೇ ಸಾಲಿನ ದರಪಟ್ಟಿಯ ಮೇಲೆ ನಮೂದಿಸಿದ ದರಗಳಾದ ಶೇಕಡ 6.07 ರಷ್ಟು ಹೆಚ್ಚುವರಿ ದರಗಳು ಅಥವಾ ರೂ. 76,10,372.76 (ರೂ. ಎಪ್ಪತ್ತಾರು ಲಕ್ಷದ ಹತ್ತು ಸಾವಿರದ ಮುನ್ನೂರ ಎಪ್ಪತ್ತೆರಡು ರೂಪಾಯಿಗಳು ಮತ್ತು ಎಪ್ಪತ್ತಾರು ಪೈಸೆಗಳು ಮಾತ್ರ) ಗಳ ಟೆಂಡರ್ ಅನುಮೋದಿಸಲು ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ 18–02–2014ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕಃ 18–02–2014ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**07] ವಿಷಯ ಸಂಖ್ಯೆಃ ಬೃ.ಸಾ.ಕಾ.ಸ್ಥಾ.ಸ:/117 /2013–14**

ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ನ್ಯಾಯಾಂಗ ಬಡಾವಣೆಯ 3ನೇ ಕ್ರಾಸ್ ರಸ್ತೆಯಲ್ಲಿ ಇತ್ತೀಚಗೆ Railway under bridge ಕಾಮಗಾರಿಯನ್ನು ನಿರ್ವಹಿಸಿ ಪೂರ್ಣಗೊಳಿಸಿರುತ್ತದೆ. ಇದರಿಂದಾಗಿ ಈ Under bridge ನಲ್ಲಿ ನ್ಯಾಯಾಂಗ ಬಡಾವಣೆಗೆ ಬಂದು ಹೋಗುವ ವಾಹನಗಳ ದಟ್ಟಣೆಯು ಹೆಚ್ಚಾಗಿರುತ್ತದೆ. ಸದರಿ ರಸ್ತೆಯಲ್ಲಿ ವಾಸವಾಗಿರುವ ಕರ್ನಾಟಕ ವಿಧಾನ ಸಭೆಯ ಸಭಾಧ್ಯಾಕ್ಷರು ಸದರಿ ರಸ್ತೆಯಲ್ಲಿ ವಾಹನ ದಟ್ಟಣೆಯು ಹೆಚ್ಚಾಗಿರುವುದರಿಂದ ಸದರಿ ರಸ್ತೆಯನ್ನು ಮೇಲ್ದರ್ಜೆಗೆ ಏರಿಸಲು ಹಾಗೂ ಪಾದಚಾರಿ ಮಾರ್ಗವನ್ನು ಉತ್ತಮಗೊಳಿಸಬೇಕೆಂದು ಕೋರಿರುತ್ತಾರೆ. ಸದರಿ ರಸ್ತೆಯನ್ನು ಪರಿವೀಕ್ಷಿಸಲಾಗಿ ಸದರಿ ರಸ್ತೆಯ ಪಾದಚಾರಿ ಮಾರ್ಗವು ತುಂಬ ಹಾಳಾಗಿದು ರಸ್ತೆಯ ಬದಿಯ ಮೋರಿಯು ಹೂಳಿನಿಂದ ತುಂಬಿಹೋಗಿರುತ್ತದೆ. ಈ ತುಂಬಿಹೋಗಿರುವ ಮೋರಿಯನ್ನು ಸ್ವಚ್ಛಗೊಳಿಸಿ ಅದರ ಮೇಲೆ ಆರ್.ಸಿ.ಸಿ. ಸ್ಲ್ಯಾಬ್‌ಗಳಿಂದ ಮುಚ್ಚಿ ಉತ್ತಮ ಪಾದಚಾರಿ ಮಾರ್ಗ ನಿರ್ಮಿಸಲು ಹಾಗೂ ಇದರೊಂದಿಗೆ ರಸ್ತೆಯನ್ನು ಮರುಡಾಂಬರೀಕರಣ ಮಾಡಲು ಉದ್ದೇಶಿಸಲಾಗಿದೆ.

ಈ ಹಿನ್ನಲೆಯಲ್ಲಿ **Improvements to footpath and asphalting to 3rd cross, 8th, 9th, & 10th main in Judicial layout Allalsandra of Yelahanka zone** ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು 2013–14ನೇ ಸಾಲಿನ ದರಪಟ್ಟಿಯಂತೆ ರೂ. 200.00 ಲಕ್ಷಗಳಿಗೆ ತಯಾರಿಸಲಾಗಿದ್ದು ಕೆಲಸದ ಅಗತ್ಯತೆಗೆ ಅನುಗುಣವಾಗಿ ಮಾನ್ಯ ಆಯುಕ್ತರವರ ಸಿ.ಆರ್.ಫ್. ಅನುದಾನ ಭರಿಸಿಕೊಳ್ಳಲು ಉದ್ದೇಶಿಸಲಾಗಿದೆ. ಸದರಿ ಕಾಮಗಾರಿಯನ್ನು ಜರೂರಾಗಿ ಕೈಗೊಳ್ಳಬೇಕಾಗಿರುವುರಿಂದ ಸದರಿ ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯನ್ನು ಹಾಗೂ ಮೆ: ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ಕಾಮಗಾರಿಯನ್ನು ವಹಿಸಲು ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ದಿನಾಂಕಃ 21–02–2014ರ ಆಯುಕ್ತರವರ ಟಿಪ್ಪಣಿ

**: ಮುಂದೂಡಿದೆ :**

**08] ವಿಷಯ ಸಂಖ್ಯೆಃ ಬೃ.ಸಾ.ಕಾ.ಸ್ಥಾ.ಸ:/ 119 /2013–14**

**ವಿಷಯ:–** ಮೈಸೂರು ರಸ್ತೆಯಲ್ಲಿ ಸಿರ್ಸಿ ವೃತ್ತದಿಂದ ಕಾರ್ಡ್ ರಸ್ತೆಯ ಜಂಕ್ಷನ್‌ವರೆಗೆ (ಬಿ.ಎಚ್.ಇ.ಎಲ್ ಜಂಕ್ಷನ್) ಸುಮಾರು 3.1 ಕಿ.ಮೀ ಮೇಲುರಸ್ತೆಯನ್ನು (ಲಿಂಕ್ ರಸ್ತೆ) ಮೆ॥ ನಂದಿ ಇನ್‌ಫ್ರಾಸ್ಟ್ರಚರ್ ಕಾರಿಡಾರ್ ಎಂಟರ್‌ಪ್ರೈಸಸ್ ಲಿಮಿಟೆಡ್ ವತಿಯಿಂದ ನಿರ್ಮಿಸಲು ಒಪ್ಪಿಗೆ ನೀಡುವ ಬಗ್ಗೆ.

**ಉಲ್ಲೇಖ:–**

1. ಮೆ॥ ನಂದಿ ಇನ್‌ಫ್ರಾಸ್ಟ್ರಚರ್ ಕಾರಿಡಾರ್ ಎಂಟರ್‌ಪ್ರೈಸಸ್ ಲಿಮಿಟೆಡ್ (NICEL) ರವರ ಪತ್ರ ಸಂಖ್ಯೆ NICE/01/236/ ದಿನಾಂಕ:30–01–2014.
2. ಕರ್ನಾಟಕ ಸರ್ಕಾರ ಹಾಗೂ NICELಮಧ್ಯೆ ಫ್ರೆಮ್ ವರ್ಕ್ ಅಗ್ರಿಮೆಂಟ್ ದಿನಾಂಕ: 03–04–1997.

ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯು ಸುಮಾರು 800 ಚ.ಮೀ.ಗೆ ಬೆಳೆದಿದ್ದು, ವಾಹನಗಳ ಸಂಖ್ಯೆ ವಾರ್ಷಿಕವಾಗಿ ನಿರಂತರವಾಗಿ ಏರುತ್ತಿದ್ದು, ಈಗ ಸುಮಾರು 48 ಲಕ್ಷದಷ್ಟು ವಾಹನಗಳ ಸಂಖ್ಯೆ ಇದ್ದು, ಇವುಗಳಲ್ಲಿ ಪ್ರಮುಖವಾಗಿ ಅಂದರೆ ಸುಮಾರು ಶೇ.70% ರಷ್ಟು ವಾಹನಗಳು ಆರ್ಟರೀಯಲ್ ಹಾಗೂ ಸಬ್ ಆರ್ಟೀರಿಯಲ್ ರಸ್ತೆಯಲ್ಲಿಯೇ ಸಂಚರಿಸುತ್ತವೆ. ಈ ಆರ್ಟೀರಿಯಲ್ ರಸ್ತೆಗಳಲ್ಲಿ ಪ್ರಮುಖವಾಗಿ Radial ರಸ್ತಗಳಾದ ಯಶವಂತಪುರ ಮಾರ್ಗವಾಗಿ ತುಮಕೂರು ರಸ್ತೆ, ಯಲಯಂಕ ಮಾರ್ಗವಾಗಿ ಬಳ್ಳಾರಿ ರಸ್ತೆ, ಹಳೇ ಮದ್ರಾಸ್ ರಸ್ತೆ, ಹಳೇ ವಿಮಾನ ನಿಲ್ದಾಣ ರಸ್ತೆ, ಸರ್ಜಾಪುರ ರಸ್ತೆ, ಎಲೆಕ್ಟ್ರಾನಿಕ್ ಸಿಟಿ ಮಾರ್ಗವಾಗಿ ಹೊಸೂರು ರಸ್ತೆ, ಬನ್ನೇರುಘಟ್ಟ ರಸ್ತೆ, ಕನಕಪುರ ರಸ್ತೆ, ಮೈಸೂರು ರಸ್ತೆ ಹಾಗೂ ಮಾಗಡಿ ರಸ್ತೆ ಇರುತ್ತವೆ. ಈ Radialರಸ್ತೆಗಳನ್ನು ಕ್ರಮವಾಗಿ ಒಳವರ್ತುಲ (Inner Ring) ರಸ್ತೆ, ಹೊರ ವರ್ತುಲ (Outer Ring Road) ರಸ್ತೆಗಳು ಗೋಲಾಕಾರದಲ್ಲಿ ಇದ್ದು, ಈ ರಿಂಗ್ ರಸ್ತೆಗಳು Radial ರಸ್ತೆಗಳಿಗೆ feeder ರಸ್ತೆಗೆಳಾಗಿರುತ್ತದೆ. ಈ ಎಲ್ಲಾ ಪ್ರಮುಖ ಆರ್ಟೀರಿಯಲ್ ರಸ್ತೆಗಳಲ್ಲಿ ಸಾರ್ವಜನಿಕರ ಪ್ರಯಾಣವನ್ನು ಹಿತಕರ ಹಾಗೂ ಸಿಗ್ನಲ್ ಮುಕ್ತವಾಗಿ ಮಾಡಲು ಈಗಾಗಲೇ ತುಮಕೂರು ರಸ್ತೆ, ಬಳ್ಳಾರಿ ರಸ್ತೆ, ಹೊಸೂರು ರಸ್ತೆಗಳಲ್ಲಿ ಎಲಿವೇಟೆಡ್ ರಸ್ತೆಯನ್ನಾಗಿ ಮಾಡಲಾಗಿದ್ದು, ಇನ್ನುಳಿದ ರಸ್ತೆಗಳಲ್ಲಿ ಪ್ರಮುಖ ಜಂಕ್ಷನ್‌ಗಳಲ್ಲಿ ಗ್ರೇಡ್ ಸೆಪರೇಟರ್ ನಿರ್ಮಾಣವನ್ನು ಸಹ ಮಾಡಲಾಗಿರುತ್ತದೆ.ಅದರಂತೆ, ಇನ್ನು ಹಲವಾರು ಪ್ರಮುಖ ಜಂಕ್ಷನ್‌ಗಳಲ್ಲಿ ಗ್ರೇಡ್ ಸೆಪರೇಟರ್ ನಿರ್ಮಿಸಲು ಪಾಲಿಕೆಯಿಂದ ಹಾಗೂ ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಯೋಜನೆಗಳನ್ನು ರೂಪಿಸಲಾಗಿದೆ.

ಅದರಂತೆ, ಇನ್ನುಳಿದ ಕಾರಿಡಾರ್‌ಗಳನ್ನು ಸಹ ಸಿಗ್ನಲ್ ಮುಕ್ತವಾಗಿ ಮಾಡಿದಲ್ಲಿ ಪ್ರಯಾಣಿಕರಿಗೆ ಸಮಯ ಉಳಿತಾಯ, ಇಂಧನ ಉಳಿತಾಯ, ವಾಯು ಮಾಲಿನ್ಯ ಕಡಿಮೆಯಾಗುವುದು ಹಾಗೂ ಶಬ್ದ ಮಾಲಿನ್ಯವು ಸಹ ಕಡಿಮೆಯಾಗುವುದು.

ಈಗ, ಪ್ರಸಕ್ತ ಪ್ರಸ್ತಾವನೆಯಲ್ಲಿ ಮೇಲಿನ Radial ರಸ್ತೆಗಳಲ್ಲಿ ಒಂದಾದ ಮೈಸೂರು ರಸ್ತೆಯಲ್ಲಿ, ಟೌನ್‌ಹಾಲ್ ಜಂಕ್ಷನ್‌ದಿಂದ ಸಿರ್ಸಿ ವೃತ್ತದ ವರೆಗೆ ಎಲಿವೇಟೆಡ್ ರಸ್ತೆ ಈಗಾಗಲೇ ಇದ್ದು, ಸಿರ್ಸಿ ವೃತ್ತದಿಂದ ಬಿ.ಹೆಚ್.ಇ.ಎಲ್ ಜಂಕ್ಷನ್‌ವರೆಗೆ ಪ್ರಯಾಣ ಮಾಡಲು ಅತೀ ಕಷ್ಟಕರ ಹಾಗೂ ಅತೀ ಹೆಚ್ಚಿನ ಸಮಯ ವ್ಯಯಿಸಬೇಕಾಗಿರುತ್ತದೆ. ಸದರಿ ಕಾರಿಡಾರ್‌ನಲ್ಲಿ ಕೆಂಗೇರಿ, ರಾಜರಾಜೇಶ್ವರಿನಗರ, ಬಿಡದಿ ಕಡೆಗೆ ಹೋಗುವ ಪ್ರಯಾಣಿಕರು ಸಹ ಇತರೇ ಪ್ರಯಾಣಿಕರೊಂದಿಗೆ ಅಂದರೆ ವಿಜಯನಗರ, ಪಾದರಾಯನಪುರ, ಆರ್.ಪಿ.ಸಿ.ಲೇಔಟ್, ಚಂದ್ರಾಲೇಔಟ್ ಕಡೆಗೆ ಹೋಗುವವರೊಂದಿಗೆ ಹೋಗಬೇಕಾಗಿದ್ದು, ಸಿರ್ಸಿ ವೃತ್ತದಿಂದಲೂ ಸಹ ಒಂದು ಎಲಿವೇಟೆಡ್ ಕಾರಿಡಾರ್ ನಿರ್ಮಿಸಿದಲ್ಲಿ ಅತೀ ಹೆಚ್ಚಿನ ಸಮಯ ಉಳಿತಾಯವಾಗುವುದು ಹಾಗೂ ಟ್ರಾಫಿಕ್ ಒತ್ತಡ ಕಡಿಮೆಯಾಗುವುದು.ಸದರಿ ಯೋಜನೆಯಿಂದ ವಾಹನ ಸಂಚಾರ ದಟ್ಟಣೆ ಸಮಸ್ಯೆಯು ಕಡಿಮೆಯಾಗುವುದಲ್ಲದೇ, ಅನೇಕ ನೇರಲಾಭ ಹಾಗೂ ಪರೋಕ್ಷ ಲಾಭವಾಗುತ್ತದೆ.

ಈ ನಿಟ್ಟಿನಲ್ಲಿ ಈ ಎಲಿವೇಟೆಡ್ ಕಾರಿಡಾರ್ ಅನ್ನು ಸುಮಾರು 3.00 ಕಿ.ಮೀ ನಿರ್ಮಿಸಲು 4 –Lane Bi-directional (7.5x2) ಎಲಿವೇಟೆಡ್ ರಸ್ತೆ ನಿರ್ಮಿಸಲು ಪಾಲಿಕೆಗೆ ಸುಮಾರು ಅಂದಾಜು ರೂ. 300.00 ಕೋಟಿ ಹಣ ಬೇಕಾಗಿರುತ್ತದೆ. ಉಲ್ಲೇಖ (2)ರಲ್ಲಿನ ಕರ್ನಾಟಕ ಸರ್ಕಾರ ಮತ್ತು M/s.NICEL ರವರು Frame Work Agreement ಪ್ರಕಾರ, ಸದರಿ ಲಿಂಕ್ ರಸ್ತೆಯನ್ನು 3.1 ಕಿ.ಮೀ ಎಲಿವೇಟೆಡ್ ರಸ್ತೆಯನ್ನು M/s.NICEL ಸಂಸ್ಥೆಯವರು ಪೂರ್ಣವಾಗಿ ಅವರ ವೆಚ್ಚದಲ್ಲಿಯೇ ನಿರ್ಮಿಸಬೇಕಾಗಿದೆ. ಉಲ್ಲೇಖ (1) ರಡಿಯಲ್ಲಿ ತಾತ್ವಿಕ ನಕ್ಷೆ M/s.NICEL ಸಂಸ್ಥೆಯವರು ಪಾಲಿಕೆಗೆ ಪ್ರಸ್ತಾವನೆಯನ್ನು ಹಾಗೂ Concept Plan ಅನ್ನು ಸಲ್ಲಿಸಿದ್ದು, ಸದರಿ ಪ್ರಸ್ತಾವನೆಗೆ ಸಹಮತಿಯನ್ನು (Concurrence) ನೀಡಲು ಕೋರಿರುತ್ತಾರೆ.

ಅದರಂತೆ, ಸದರಿ Concept Plan ಗೆ ಅನುಮತಿ/ಸಹಮತಿಯನ್ನು ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ನೀಡುವ ಬಗ್ಗೆ ಪಾಲಿಕೆಯ ಸಭೆಯು ಮಂಡಿಸಿದೆ.

1) ಸದರಿ ಎಲಿವೇಟೆಡ್ ರಸ್ತೆಯ ನಿರ್ಮಾಣವನ್ನು ಮಾಡುವಾಗ ಎಲ್ಲಾ ನಿಯಮಾವಳಿಗಳನ್ನು ಅಂದರೆ IRC Codes, BIS Codesಗಳನ್ನು ಪಾಲನೆ ಮಾಡುವುದು.
2) ಎಲಿವೇಟೆಡ್ ರಸ್ತೆಯು Bi-directional 4-lane ಗಳಾಗಿರಬೇಕು (2x7.5m) ಹಾಗೂ ಮೀಡಿಯನ್ ಸಹ ಅಳವಡಿಸಬೇಕು.
3) ಪಾದರಾಯನಪುರ ಜಂಕ್ಷನ್ ಬಳಿ ಸಿಗ್ನಲ್ ಮುಕ್ತ ವಾಹನ ಸಂಚಾರವಾಗಿ ವಿನ್ಯಾಸ ರೂಪಿಸಿ ಕಾಮಗಾರಿ ನಿರ್ವಹಿಸಬೇಕು.
4) Up-ramp and Down ramp ಗಳನ್ನು Standard ಅನುಗುಣವಾಗಿ ನಿರ್ಮಾಣ ಮಾಡಬೇಕು.
5) ಕೆ.ಎಸ್.ಆರ್.ಟಿ.ಸಿ ಸಂಸ್ಥೆಯ ಸ್ಯಾಟಿಲೈಟ್ ಬಸ್ ನಿಲ್ದಾಣಕ್ಕೆ ಸದರಿ ಕೆ.ಎಸ್.ಆರ್.ಟಿ.ಸಿ./ ಬಿ.ಎಂ.ಟಿ.ಸಿ. ಬಸ್‌ಗಳನ್ನು ಈ ಮೇಲುಸೇತುವೆಯನ್ನು ಉಪಯೋಗಿಸಿಕೊಳ್ಳಲು ಸೂಕ್ತ Entry/Exit ಅನ್ನು ನೀಡುವುದು.
6) BHEL ವೃತ್ತದ ಬಳಿ, ಸಿರ್ಸಿ ವೃತ್ತದಿಂದ ಸದರಿ ಮೆಲ್ಸೇತುವೆ ರಸ್ತೆಯಿಂದ ಬರುವ ವಾಹನಗಳಿಗೆ ಒಂದು Down-Ramp ನೀಡಬೇಕು ಹಾಗೂ ಮೈಸೂರು, ಕೆಂಗೇರಿ, ರಾ.ರಾ.ನಗರ, ವಿಜಯನಗರ, ಚಂದ್ರಾಲೇಔಟ್‌ನಿಂದ ಬರುವ ವಾಹನಗಳಿಗೆ BHEL ವೃತ್ತದ ಬಳಿ ಒಂದು Up-Ramp ನೀಡುವುದು.

7) ಮೇಲುಸೇತುವೆ ನಿರ್ಮಾಣದ ನಂತರ, ಸದರಿ ಸೇತುವೆ ಕೆಳಭಾಗದ ರಸ್ತೆಯನ್ನು ಅಂದರೆ 3.1 ಕಿ.ಮೀ ರಸ್ತೆಯನ್ನು (at grade ರಸ್ತೆಯನ್ನು) M/s.NICEL ಸಂಸ್ಥೆಯವರು ದುರಸ್ತಿಗೊಳಿಸಿ ನಿರ್ವಹಣೆ ಮಾಡಬೇಕು.
8) ಕೆಳರಸ್ತೆಯಲ್ಲಿ ಪಾದಚಾರಿಗಳು ಮೈಸೂರು ರಸ್ತೆಯನ್ನು ಸುರಕ್ಷಿತವಾಗಿ ದಾಟಲು ಕನಿಷ್ಠ '3' ಕಡೆ ಪಾದಚಾರಿ ಸುರಂಗ ಮಾರ್ಗ/ ಪಾದಾಚಾರಿ ಸ್ಕೈವಾಕ್ ನಿರ್ಮಾಣ ಮಾಡುವುದು.
9) ಕಾಮಗಾರಿ ಅನುಷ್ಠಾನದ ಸಮಯದಲ್ಲಿ, ರಸ್ತೆಯಲ್ಲಿ ಟ್ರಾಫಿಕ್ ಸಮಸ್ಯೆಯಾಗದಂತೆ, ಯಾವುದೇ ಅಡಚಣೆ ಇಲ್ಲದೇ ನಿರ್ವಹಿಸುವುದು.
10) ಕಾಮಗಾರಿಯ ನಿರ್ವಹಣೆ ಸಂಧರ್ಭದಲ್ಲಿ ಯಾವುದೇ ಅನಾಹುತ/ಅಪಘಾತಗಳು ಸಂಭವಿಸಿದ್ದಲ್ಲಿ, M/s.NICEL ರವರ ಜವಾಬ್ದಾರಿಯಾಗಿರುತ್ತದೆ.
11) ಸಂಪೂರ್ಣ ಕಾರಿಡಾರ್‌ನಲ್ಲಿ ಅಂದರೆ 3.10 ಕಿ.ಮೀ. ಮೇಲುಸೇತುವೆ ಹಾಗೂ At-grade ರಸ್ತೆಯಲ್ಲಿ ವ್ಯವಸ್ಥಿತವಾದ ಬೀದಿ ದೀಪಗಳನ್ನು ಅಳವಡಿಸುವುದು ಹಾಗೂ ನಿರ್ವಹಿಸುವುದು.

ಈ ಎಲ್ಲಾ ಮೇಲ್ಕಂಡ ಷರತ್ತು/ ನಿಬಂದನೆಗಳನ್ನು ವಿಧಿಸಿ ಸದರಿ M/s.NICEL ಸಂಸ್ಥೆಯವರ ಪ್ರಸ್ತಾವನೆಯನ್ನು ಅನುಮೋದಿಸಲು ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ದಿನಾಂಕಃ 21–02–2014ರ ಆಯುಕ್ತರು ರವರ ಟಿಪ್ಪಣಿ.

**ಃ ಮುಂದೂಡಿದೆ ಃ**

**09] ವಿಷಯ ಸಂಖ್ಯೆಃ ಬೃ.ಸಾ.ಕಾ.ಸ್ಥಾ.ಸ:/ 122 /2013–14**

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, Remodelling of secondary Valley V-104 (Jagajeevan Ramnagar to jai Bharath Nagar) V-105 (tank Bund road near Ranganatha colony to Salappa layout) in V.Valley ಕಾಮಗಾರಿಗೆ ರೂ. 128.10 ಲಕ್ಷಗಳ ಮೊತ್ತದ ಅಂದಾಜನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅಂದಾಜುಪಟ್ಟಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆ ಪಡೆಯಲಾಗಿರುತ್ತದೆ. ಈ ಕಾಮಗಾರಿಗೆ ಟಂಡರ್ ನೋಟಿಫಿಕೇಷನ್ ನಂಃ EE/SwD/ಪಶ್ಚಿಮ/TEND/25/12-13 ದಿನಾಂಕಃ 04–03–2013ರಂದು ತಾಂತ್ರಿಕ ಮತ್ತು ಆರ್ಥಿಕ ಬಿಡ್ (double cover) ಟೆಂಡರ್ ಆಹ್ವಾನಿಸಲಾಗಿತ್ತು. ಅದರಂತೆ ಬಿಡ್‌ನಲ್ಲಿ ಭಾಗವಹಿಸಿದ್ದ ಗುತ್ತಿಗೆದಾರರ ತಾಂತ್ರಿಕ ಬಿಡ್‌ಅನ್ನು ದಿನಾಂಕಃ 10–09–2013ರಂದು ತೆರೆಯಲಾಗಿ ಶ್ರೀ. ಸೋಮಶೇಖರ್.ಆರ್.ಜಿ.(ಸಮೃದ್ಧಿ ಕನ್ಸಟ್ರಕ್ಷನ್) ಒಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿರುತ್ತಾರೆ. ಈ ಗುತ್ತಿಗೆದಾರರ ತಾಂತ್ರಿಕ ಬಿಡ್‌ಗೆ ದಿನಾಂಕಃ 09–10–2013ರಂದು ಮುಖ್ಯ ಅಭಿಯಂತರರು (ಬೃ.ನೀ.ಗಾ) ರವರು ಅನುಮೋದನೆ ನೀಡಿರುತ್ತಾರೆ. ತದನಂತರ ದಿನಾಂಕಃ 09–10–2013ರಣದಯ ಆರ್ಥಿಕ ಬಿಡ್‌ನ್ನು ತೆರೆಯಲಾಗಿದೆ.

ಆರ್ಥಿಕ ಬಿಡ್‌ನ ವಿವರಗಳು ಈ ಕೆಳಕಂಡಂತಿವೆ:

| ಕ್ರ. ಸಂ. | ಗುತ್ತಿಗೆದಾರರ ಹೆಸರು | ಕಾಮಗಾರಿಯ ಅಂದಾಜುಮೊತ್ತ ರೂ. ಲಕ್ಷಗಳಲ್ಲಿ | ಟೆಂಡರ್‌ಗಿಟ್ಟ ಮೊತ್ತ (ಮಂಜೂರಾದ ಅಂದಾಜುಪಟ್ಟಿಯ ದರದಂತೆ 2011–12ನೇ ಸಾಲಿನ ದರಪಟ್ಟಿಗೆ) ರೂ. | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | ಅಂದಾಜುಪಟ್ಟಿಯ (2010–11ನೇ ಸಾಲಿನ ದರಪಟ್ಟಿಯ ಹೋಲಿಸಿದ ದರಗಳಂತೆ) | 2013–14ನೇ ಸಾಲಿನ ದರಪಟ್ಟಿಯ ಹೋಲಿಸಿದ ದರಗಳಂತೆ) |
|---|---|---|---|---|---|---|
| 1 | ಶ್ರೀ. ಸೋಮಶೇಖರ್.ಜಿ. (ಸಮೃದ್ಧಿ ಕನ್ಸಟ್ರಕ್ಷನ್) | 128.10 | 12196204.27 | 20007737.60 | 64.05% ರಷ್ಟು ಹೆಚ್ಚು | 27.13% ರಷ್ಟು ಹೆಚ್ಚು |

ಈ ಮೇಲೆ ತಿಳಿಸಿರುವ ದರಗಳು ಅತಿ ಹೆಚ್ಚಾದ ಕಾರಣ ಗುತ್ತಿಗೆದಾರರನ್ನು ದರ ಸಂಧಾನಕ್ಕೆ ಕರೆಯಲಾಗಿ ಗುತ್ತಿಗೆದಾರರು ಈ ಕೆಳಕಂಡಂತೆ ದರಗಳನ್ನು ಕಡಿಮೆಗೊಳಿಸಿರುತ್ತಾರೆ.

ಆರ್ಥಿಕ ಬಿಡ್‌ನ ಸಂಧಾನಿತ ದರಗಳ ವಿವರಗಳು ಈ ಕೆಳಕಂಡಂತಿವೆ:

| ಕ್ರ. ಸಂ. | ಗುತ್ತಿಗೆದಾರರ ಹೆಸರು | ಕಾಮಗಾರಿಯ ಅಂದಾಜುಮೊತ್ತ ರೂ. ಲಕ್ಷಗಳಲ್ಲಿ | ಟೆಂಡರ್‌ಗಿಟ್ಟ ಮೊತ್ತ (ಮಂಜೂರಾದ ಅಂದಾಜುಪಟ್ಟಿಯ ದರದಂತೆ 2011–12ನೇ ಸಾಲಿನ ದರಪಟ್ಟಿಗೆ) ರೂ. | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | ಅಂದಾಜುಪಟ್ಟಿಯ (2010–11ನೇ ಸಾಲಿನ ದರಪಟ್ಟಿಯ ಹೋಲಿಸಿದ ದರಗಳಂತೆ) | 2013–14ನೇ ಸಾಲಿನ ದರಪಟ್ಟಿಯ ಹೋಲಿಸಿದ ದರಗಳಂತೆ) |
|---|---|---|---|---|---|---|
| 1 | ಶ್ರೀ. ಸೋಮಶೇಖರ್.ಜಿ. (ಸಮೃದ್ಧಿ ಕನ್ಸಟ್ರಕ್ಷನ್) | 128.10 | 12196204.27 | 17618336.28 | 44.46% ರಷ್ಟು ಹೆಚ್ಚು | 11.95% ರಷ್ಟು ಹೆಚ್ಚು |

ಮೇಲ್ಕಂಡ ವಿವರಗಳನ್ನು ಪರಿಶೀಲಿಸಲಾಗಿ ಈ ಕಾಮಗಾರಿಗೆ ಅತಿ ಕನಿಷ್ಟ ದರ ನಮೂದಿಸಿರುವ ಎಲ್–1 ಗುತ್ತಿಗೆದಾರರಾದ ಶ್ರೀ. ಸೋಮಶೇಖರ್.ಜಿ. (ಸಮೃದ್ಧ ಕನ್ಸ್‌ಟ್ರಕ್ಷನ್ಸ್) ರವರು ಸಂಧಾನದ ನಂತರ ರೂ. 17618336.28 ಗಳನ್ನು ನಮೂದಿಸಿದ್ದು, ಈ ದರಗಳನ್ನು 2010–11ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇಕಡ 44.46 ರಷ್ಟು ಹೆಚ್ಚಿಗೆ ಮತ್ತು ಇದೇ ಮೊತ್ತವನ್ನು 2013–14ರ ದರಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇಕಡ 11.95 ರಷ್ಟು ಹೆಚ್ಚು ಇರುತ್ತದೆ. ಈ ದರಗಳು ಮಾರ್ಕೆಟ್ ದರಗಳಿಗೆ ಹೋಲಿಸಿದರೆ ಸ್ಪರ್ಧಾತ್ಮಕ ದರಗಳಾಗಿದ್ದು ಅನುಮೋದಿಸಬಹುದಾಗಿದ್ದರಿಂದ ಇದಕ್ಕೆ ಮಾನ್ಯ ಆಯುಕ್ತರವರು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅನುಮೋದನೆ ನೀಡಿರುತ್ತಾರೆ.

ಈ ಕಾಮಗಾರಿ ಟೆಂಡರ್‌ನಲ್ಲಿ **ಶ್ರೀ. ಸೋಮಶೇಖರ್.ಜಿ. (ಸಮೃದ್ಧ ಕನ್ಸ್‌ಟ್ರಕ್ಷನ್ಸ್)** ರವರು ನಮೂದಿಸಿರುವ ಟೆಂಡರ್ ಮೊತ್ತ ರೂ. 17618336.28 ಗಳು 2013–14ನೇ ಸಾಲಿನ ಎಸ್.ಆರ್.ದರಗಳಿಗೆ ಹೋಲಿಸಿದರೆ ಶೇಕಡ 11.95 ರಷ್ಟು ಹೆಚ್ಚಿನ ದರಗಳಿಗೆ ಅನುಮೋದನೆ ನೀಡಲು ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ದಿನಾಂಕಃ22–02–2014ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕಃ 22–02–2014ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**10] ವಿಷಯ ಸಂಖ್ಯೆಃ ಬೃ.ಸಾ.ಕಾ.ಸ್ಥಾ.ಸ:/ 123 /2013–14**

ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, Construction of Approaches to Pedestrian crossing and Light vehicular Underpass at Lingarajapuram railway crossing ಕಾಮಗಾರಿಗೆ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ವಿಷಯ ಸಂಖ್ಯೆ:ಬೃ.ಸಾ.ಕ.ಸ್ಥಾ.ಸ/60/ 2012–13 ದಿನಾಂಕ:19.07.2012ರಲ್ಲಿ ರೂ, 210.00 ಲಕ್ಷ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ.

ಈ ಮೇರೆಗೆ ಕಾರ್ಯಪಾಲಕ ಅಭಿಯಂತರರು, ರಮೂಸೌ–ಆರ್‌ಓಬಿ/ಆರ್‌ಯುಬಿ ವಿಭಾಗದವರು e-Procurement ದ್ವಿ–ಲಕೋಟೆ ಪದ್ಧತಿಯಲ್ಲಿ 2ನೇ ಬಾರಿ ಟೆಂಡರ್ ಆಹ್ವಾನಿಸಿದ್ದು, ಸದರಿ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಈ ಪೈಕಿ ತಾಂತ್ರಿಕ ಬಿಡ್‌ನಲ್ಲಿ ಏಕಮಾತ್ರ ಗುತ್ತಿಗೆದಾರರು ಅರ್ಹತೆ ಹೊಂದಿರುತ್ತಾರೆ. ಇವರ ಆರ್ಥಿಕ ಬಿಡ್ ತೆರೆಯಲಾಗಿ ಶ್ರೀ.ನಾಗೇನೇನಿ ಮುನಿಸ್ವಾಮಿನಾಯ್ಡು ಕೃಷ್ಣಮೂರ್ತಿ ರವರು ನಮೂದಿಸಿರುವ ಮೊತ್ತದ ವಿವರ ಕೆಳಕಂಡತಿರುತ್ತದೆ.

| **ಕ್ರ. ಸಂ** | **ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರ ಹೆಸರು** | **ಟೆಂಡರ್‌ಗಿಟ್ಟ ಮೊತ್ತ ರೂ. ಲಕ್ಷಗಳಲ್ಲಿ** | **ಗುತ್ತಿಗೆದಾರರು ನಮೂದಿಸಿರುವ ಟೆಂಡರ್ ಮೊತ್ತ ಹಾಗೂ ಟೆಂಡರ್ ದರ** | **ಗುತ್ತಿಗೆದಾರರ ಮೊದಲನೇ ಸಂಧಾನಿತ ಟೆಂಡರ್ ಮೊತ್ತ ಹಾಗೂ ಟೆಂಡರ್ ದರ** | **ಗುತ್ತಿಗೆದಾರರ ಎರಡನೇ ಬಾರಿ ಸಂಧಾನಿತ ಟೆಂಡರ್ ಮೊತ್ತ ಹಾಗೂ ಟೆಂಡರ್ ದರ** |
|---|---|---|---|---|---|

| | | | | | |
|---|---|---|---|---|---|
| 1 | ಶ್ರೀ.ನಾಗೇನೆನಿ ಮುನಿಸ್ವಾಮಿನಾಯ್ಡು ಕೃಷ್ಣಮೂರ್ತಿ | 143.02 | ರೂ,196.02 ಲಕ್ಷಗಳು ಶೇ,37.06 ರಷ್ಟು ಹೆಚ್ಚುವರಿ (ಅನುಮೋದಿತ ಅಂದಾಜು ಪಟ್ಟಿಗೆ ಹೋಲಿಸಿದಾಗ) ಹಾಗೂ ಶೇ,24.06 ರಷ್ಟು ಹೆಚ್ಚುವರಿ (2013–14ನೇ ಸಾಲಿನ ದರಪಟ್ಟಿಯಂತೆ) | ರೂ,192.06 ಲಕ್ಷಗಳು ಶೇ,34.28 ರಷ್ಟು ಹೆಚ್ಚುವರಿ (ಅನುಮೋದಿತ ಅಂದಾಜು ಪಟ್ಟಿಗೆ ಹೋಲಿಸಿದಾಗ) ಹಾಗೂ ಶೇ,21.54 ರಷ್ಟು ಹೆಚ್ಚುವರಿ (2013–14ನೇ ಸಾಲಿನ ದರಪಟ್ಟಿಯಂತೆ) | ರೂ,181.67 ಲಕ್ಷಗಳು ಶೇ,27.02 ರಷ್ಟು ಹೆಚ್ಚುವರಿ (ಅನುಮೋದಿತ ಅಂದಾಜು ಪಟ್ಟಿಗೆ ಹೋಲಿಸಿದಾಗ) ಹಾಗೂ ಶೇ,14.97 ರಷ್ಟು ಹೆಚ್ಚುವರಿ (2013–14ನೇ ಸಾಲಿನ ದರಪಟ್ಟಿಯಂತೆ) |

ಸದರಿ ಟೆಂಡರ್‌ನಲ್ಲಿ ತಾಂತ್ರಿಕವಾಗಿ ಅರ್ಹರಾದ ಏಕಮಾತ್ರ ಗುತ್ತಿಗೆದಾರರಾದ ಶ್ರೀ.ನಾಗೇನೆನಿ ಮುನಿಸ್ವಾಮಿನಾಯ್ಡು ಕೃಷ್ಣಮೂರ್ತಿರವರು ರೂ.196.02 ಲಕ್ಷಗಳನ್ನು ನಮೂದಿಸಿರುತ್ತಾರೆ. ಗುತ್ತಿಗೆದಾರರು ನಮೂದಿಸಿರುವ ಟೆಂಡರ್ ಮೊತ್ತವನ್ನು ಕಡಿಮೆ ಮಾಡಲು 2 ಬಾರಿ ಸಂಧಾನ ನಡೆಸಲಾಗಿದ್ದು, ಸದರಿರವರು ಅಂತಿಮವಾಗಿ ರೂ.181.67 ಲಕ್ಷಗಳನ್ನು ನಮೂದಿಸಿರುತ್ತಾರೆ. ಸದರಿ ಸಂಧಾನಿತ ಟೆಂಡರ್ ಮೊತ್ತವನ್ನು ಅನುಮೋದಿತ ಅಂದಾಜು ಪಟ್ಟಿಗೆ ಹೋಲಿಸಿದಾಗ (2011–12 ದರಪಟ್ಟಿಗೆ) ಟೆಂಡರ್ ದರವು ಶೇಕಡ 27.02 ರಷ್ಟು ಹೆಚ್ಚು ಇರುತ್ತದೆ. ಹಾಗೂ 2013–14 ನೇ ಸಾಲಿನ ಬೆಂಗಳೂರು ವೃತ್ತದ ಲೋಕೋಪಯೋಗಿ ಇಲಾಖೆಯ ದರಪಟ್ಟಿಯ ದರಗಳಿಗೆ ಹೋಲಿಸಿದಾಗ ಟೆಂಡರ್ ದರವು ಶೇಕಡ 14.97 ರಷ್ಟು ಹೆಚ್ಚು ಇರುತ್ತದೆ.

ಸದರಿ ಯೋಜನೆಯು ತುರ್ತಾಗಿದ್ದು e-procurement ನಲ್ಲಿ 2ನೇ ಬಾರಿಗೆ ಟೆಂಡರ್ ಆಹ್ವಾನಿಸಿದ್ದು ಪ್ರಮುಖ ದಿನಪತ್ರಿಕೆಯಲ್ಲಿ ಪ್ರಚುರಪಡಿಸಿದ್ದು ಪಾಲಿಕೆ ವೆಬ್‌ಸೈಟ್‌ನಲ್ಲಿಯೂ ಟೆಂಡರ್ ಪ್ರಕಟಿಸಿದ್ದರೂ ಸಹ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಇವರ ಪೈಕಿ ಏಕಮಾತ್ರ ಗುತ್ತಿಗೆದಾರರು ತಾಂತ್ರಿಕ ಅರ್ಹತೆ ಹೊಂದಿದ್ದು ಇವರ ಏಕಮಾತ್ರ ಆರ್ಥಿಕ ಬಿಡ್ ತೆರೆದು ಮೌಲ್ಯಮಾಪನ ಮಾಡಿ ಟೆಂಡರ್ ಅನುಮೋದನೆಗಾಗಿ ಪರಿಗಣಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಇದನ್ನು ಸ್ಪರ್ಧಾತ್ಮಕ ಬಿಡ್ ಎಂದು ಪರಿಗಣಿಸಿದ್ದು ಸಂಧಾನಿತ ಟೆಂಡರ್ ದರವು ಸಹ ಸಮಂಜಸವಾಗಿರುವುದರಿಂದ ಈ ಟೆಂಡರ್‌ನ್ನು ಪರಿಗಣಿಸಬಹುದಾಗಿದೆ.

ಈ ಮೇರೆಗೆ ಸದರಿ ಯೋಜನೆಯ ಟೆಂಡರ್‌ನ ಗುತ್ತಿಗೆದಾರರಾದ ಶ್ರೀ.ನಾಗೇನೆನಿ ಮುನಿಸ್ವಾಮಿನಾಯ್ಡು ಕೃಷ್ಣಮೂರ್ತಿ ರವರ ಸಂಧಾನಿತ ಟೆಂಡರ್ ಮೊತ್ತ ರೂ.1,81,66,979.00 (ರೂಪಾಯಿ ಒಂದು ಕೋಟಿ ಎಂಬತ್ತೊಂದು ಲಕ್ಷದ ಅರವತ್ತಾರು ಸಾವಿರದ ಒಂಬೈನೂರ ಎಪ್ಪತ್ತೊಂಭತ್ತು ಮಾತ್ರ)ಗಳ ಟೆಂಡರ್ ಅನುಮೋದನೆಗಾಗಿ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ದಿನಾಂಕಃ24–02–2014ರ ಆಯುಕ್ತರು ರವರ ಟಿಪ್ಪಣಿ.

**: ಮುಂದೂಡಿದೆ :**

**11] ವಿಷಯ ಸಂಖ್ಯೆಃ ಬೃ.ಸಾ.ಕಾ.ಸ್ಥಾ.ಸ:/ 124/2013–14**

ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಶಿವಾಜಿನಗರ ವ್ಯಾಪ್ತಿಗೆ ಬರುವ ವಾರ್ಡ್ ಸಂ 63, ಬ್ರಾಡ್ ವೇ ರಸ್ತೆಯಲ್ಲಿ ಬಿಬಿಎಂಪಿ ಸ್ವತ್ತಿದ್ದು, ಸದರಿ ಸ್ವತ್ತಿನಲ್ಲಿ ನಾಗರೀಕರ ಆರೋಗ್ಯದ ಹಿತದೃಷ್ಠಿಯಿಂದ ಉತ್ತಮವಾದ ಹೈಟೆಕ್ ಮಾದರಿಯ ಆಸ್ಪತ್ರೆಯನ್ನು ನಿರ್ಮಾಣ ಮಾಡಿ ಸಾರ್ವಜನಿಕರಿಗೆ ಸೌಕರ್ಯ ಕಲ್ಪಿಸಬೇಕಾಗಿ ಅಂದಿನ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ. ಎಂ.ಕೆ ಗುಣಶೇಕರ್ ರವರು ಪ್ರಸ್ತಾಪಿಸಿರುವ ಮೇರೆಗೆ ಹಾಗೂ 2012–13 ನೇ ಸಾಲಿನ ಬಿಬಿಎಂಪಿ ಆಯವ್ಯಯದ ಪಿ–2413 ಅಡಿಯಲ್ಲಿ ಸದರಿ ಆಸ್ಪತ್ರಯ ಕಟ್ಟಡ ನಿರ್ಮಾಣ ಮಾಡಲು ಚಾಲ್ತಿ ಕಾಮಗಾರಿ ಅಡಿಯಲ್ಲಿ ಮೀಸಲಿಟ್ಟ ಮೇರೆಗೆ ಬಿಬಿಎಂಪಿ ಸಮಾಲೋಚಕರಾದ ಮೆ॥ ನಂದೀಶ್ ಅಸೋಸಿಯೇಟ್ಸ್ ರವರಿಂದ ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕೆ (**Construction of Hospital building in ward no-63**)ಡಿ.ಪಿ.ಆರ್ ನ್ನು ರೂ. 932.00 ಲಕ್ಷಗಳಿಗೆ ತಯಾರಿಸಲ್ಪಟ್ಟಿದೆ.

ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ದಿ: 26–12–2012 ರಂದು ನಡೆಸಲಾದ ಸಭೆಯ ನಡವಳಿಯಲ್ಲಿ ವಿಷಯದ ಸಂ: 155/2012–13 ರನ್ವಯ ಈ ಕೆಳಕಂಡ ಅಂಶಗಳಿಗೆ ಅನುಮೋನೆ ನೀಡಿದೆ.

1. ರೂ. 155.00 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು.
2. ಈ ಯೋಜನೆಯನ್ನು ಶೀಘ್ರವಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಘನ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ, ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿದ ನಂತರ ಘನ ಸರ್ಕಾರದ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸಲು ಅನುಮೋದನೆ.
3. ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಿ ಅನುಷ್ಠಾನಗೊಳಿಸಲು ಅನುಮೋದನೆ.

ದಿ: 30–1–2013 ರಂದು ನಡೆದ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ವಿಷಯ ಸಂ: 26(360)2012–13ರ ಅನ್ವಯ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ದಿ: 26/12–2012 ರಂದು ತಗೆದುಕೊಂಡ ತೀರ್ಮಾನವನ್ನು ಸರ್ವಾನುಮತದಿಂದ ಒಪ್ಪಿ ಅಂಗೀಕರಿಸಿರುತ್ತಾರೆ.

ಸದರಿ ಕಾಮಗಾರಿಯ ಟೆಂಡರ್‌ನ್ನು ಕಾರ್ಯಪಾಲಕ ಅಭಿಯಂತರರು (ಯೋಜನೆ) ಪೂರ್ವ ಕಛೇರಿಯ ಟೆಂಡರ್ ಪ್ರಕಟಣೆಯ ಸಂ:EE(P)E/TEND/19/13-14 ದಿ: 22-05-2013 ರ ಅನ್ವಯ ಪ್ರಕಟಿಸಲಾಗಿರುತ್ತದೆ. ಸದರಿ ಟೆಂಡರ್‌ನ್ನು ರಾಜ್ಯ ಟೆಂಡರ್ ಬುಲೇಟಿನ್‌ನಲ್ಲಿ ಪ್ರಕಟಿಸಲು ಉಪಕಾರ್ಯರ್ಶಿ ನಗರಾಭಿವೃದ್ಧಿ ಇಲಾಖೆಯವರಿಗೆ ದಿ: 22-05-2013 ರಂದು ಸಲ್ಲಿಸಿದ್ದು, ಸ್ವೀಕೃತಿಯನ್ನು ಪಡೆಯಲಾಗಿದೆ. ಹಾಗೂ ಜಿಲ್ಲಾ ಟೆಂಡರ್ ಬುಲೇಟಿನ್ ನಲ್ಲಿ ಪ್ರಕಟಿಸಲು ಜಿಲ್ಲಾಧಿಕಾರಿಗಳು ಬೆಂಗಳೂರು ರವರಿಗೆ ಸಲ್ಲಿಸಿ ಸ್ವೀಕೃತಿಯನ್ನು ಪಡೆಯಲಾಗಿದೆ. ಸದರಿ ಪ್ರಕಟಣೆಯು ಇಂಗ್ಲೀಷ್ ದಿನಪತ್ರಿಕೆ ಟೈಮ್ಸ್ ಆಫ್ ಇಂಡಿಯಾದಲ್ಲಿ ದಿ: 22-5-2013 ರಲ್ಲಿ ಹಾಗೇಯೇ ಕನ್ನಡ ದಿನಪತ್ರಿಕೆ ಪ್ರಜಾವಾಣಿಯಲ್ಲಿ ದಿ: 22-05-2013 ರಲ್ಲಿ ಪ್ರಕಟವಾಗಿರುತ್ತದೆ. ಸದರಿ ಟೆಂಡರ್‌ನ್ನು ದಿ: 8-7-213 ರಂದು ತೆರೆಯಲಾಯಿತು. ಟೆಂಡರಿನಲ್ಲಿ 2 ಗುತ್ತಿಗೆದಾರರು ಭಾಗವಹಿಸಿದ್ದು ಒಬ್ಬರು ಗುತ್ತಿಗೆದಾರರು ಮಾತ್ರ ಪ್ರೀಕ್ವಾಲಿಫಿಕೇಷನ್‌ನಲ್ಲಿ ಉತ್ತೀರ್ಣರಾಗಿರುತ್ತಾರೆ. ಆದಕಾರಣ ಇದು ಸಿಂಗಲ್ ಟೆಂಡರ್ ಆದ ಉದ್ದೇಶದಿಂದ ರೀಟೆಂಡರ್ ಕರೆಯಲು ಅನುಮತಿಯನ್ನು ಪಡೆದು ಹೊಸದಾಗಿ 2ನೇ ಕರೆಯನ್ನು ಕರೆಯಲಾಯಿತು. ಸದರಿ ಕಾಮಗಾರಿಯ 2ನೇ ಅಲ್ಪಾವಧಿ ಟೆಂಡರ್‌ನ್ನು ಟೆಂಡರ್ ನೋಟಿಫಿಕೇಷನ್ ಸಂ: EE(P)E/TEND/19-13-14 ದಿ: 24-8-2013 ರನ್ವಯ ಕರೆಯಲಾಯಿತು. ಸದರಿ ಟೆಂಡರ್ 2ನೇ ಕರೆಯನ್ನು ರಾಜ್ಯ ಟೆಂಡರ್ ಬುಲೇಟಿನ್‌ನಲ್ಲಿ ಪ್ರಕಟಿಸಲು ಉಪಕಾರ್ಯರ್ಶಿ ನಗರಾಭಿವೃದ್ಧಿ ಇಲಾಖೆಯವರಿಗೆ ದಿ: 24-08-2013 ರಂದು ಕೋರಿದ್ದು, ಸ್ವೀಕೃತಿಯನ್ನು ಪಡೆಯಲಾಗಿದೆ. ಹಾಗೂ ಜಿಲ್ಲಾ ಟೆಂಡರ್ ಬುಲೇಟಿನ್ ನಲ್ಲಿ ಪ್ರಕಟಿಸಲು ಜಿಲ್ಲಾಧಿಕಾರಿಗಳು ಬೆಂಗಳೂರು ರವರಿಗೆ ಸಲ್ಲಿಸಿ ಸ್ವೀಕೃತಿಯನ್ನು ಪಡೆಯಲಾಗಿದೆ. ಸದರಿ ಪ್ರಕಟಣೆಯು ಇಂಗ್ಲೀಷ್ ದಿನಪತ್ರಿಕೆ ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ದಿ: 24-8-2013 ರಲ್ಲಿ ಹಾಗೇಯೇ ಕನ್ನಡ ದಿನಪತ್ರಿಕೆ ವಿಜಯ ಕರ್ನಾಟಕದಲ್ಲಿ ದಿ: 24-08-2013 ರಂದು ಪ್ರಕಟವಾಗಿರುತ್ತದೆ. ದಿ: 30-9-2013 ರಂದು ಟೆಕ್ನಿಕಲ್ ಬಿಡ್ಡ್ ತೆರೆಯಲಾಗಿದ್ದು, ಅದರಲ್ಲಿ 2 ಗುತ್ತಿಗೆದಾರರು ಪ್ರೀಕ್ವಾಲಿಫಿಕೇಷನ್ ನಲ್ಲಿ ಉತ್ತೀರ್ಣರಾಗಿರುತ್ತಾರೆ.

ದಿ: 21-10-2013 ರಂದು ಫೈನಾನ್ಸಿಯಲ್ ಬಿಡ್ಡ್ ತೆರೆಯಲಾಗಿರುತ್ತದೆ. ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಅಂದಾಜುಪಟ್ಟಿಗೆ ಹಾಗೂ ಪ್ರಸಕ್ತ ಸಾಲಿನ ದರಪಟ್ಟಿಗೆ ಹೋಲಿಸಲಾಗಿದೆ. 2 ಗುತ್ತಿಗೆದಾರರಲ್ಲಿ ಶ್ರೀ. ಮುನಿವೆಂಕಟಪ್ಪ ರಾಜೇಂದ್ರ ಎಂಬುವವರು ಎಲ್ 1 ಗುತ್ತಿಗೆದಾರರಾಗಿದ್ದು ಇವರ ಟೆಂಡರ್ ಮೊತ್ತ ರೂ. 120338988.88 ಗಳು ಆಗಿರುತ್ತದೆ. ಅಂದಾಜು ದರಕ್ಕೆ ( 2010-11 ನೇ ಸಾಲಿನ) 48.15% ಹೆಚ್ಚಾಗಿ ಆಗಿರುತ್ತದೆ. ಹಾಗೂ ಪ್ರಸಕ್ತ ಸಾಲಿಗೆ (2013-14) ಹೋಲಿಸಿದಾಗ 22.68% ಹೆಚ್ಚಾಗಿ ಆಗಿರುತ್ತದೆ. ಶ್ರೀ. ಟಿ.ಎನ್ ವೆಂಕಟೇಶ್ ರವರು ಎಲ್ 2 ಗುತ್ತಿಗೆದಾರರಾಗಿದ್ದು ಟೆಂಡರ್ ನಮೂದಿಸಿರುವ ಮೊತ್ತ ರೂ. 125309673.96 ಆಗಿರುತ್ತದೆ, ಅದು 54.27% ಅಂದಾಜುಪಟ್ಟಿಯ ದರಕ್ಕೆ ಹೆಚ್ಚಿಗೆಯಾಗಿರುತ್ತದೆ. ಪ್ರಸಕ್ತ ಸಾಲಿಗೆ ಹೋಲಿಸಿದರೆ 25.74% ಹೆಚ್ಚಿಗೆ ಆಗಿರುತ್ತದೆ.

ಎಲ್1 ಗುತ್ತಿಗೆದಾರರಾದ ಶ್ರೀ. ಮುನಿವೆಂಕಟಪ್ಪ ರಾಜೇಂದ್ರ ರವರಿಗೆ ದಿ: 19-11-2013 ರಂದು ಈ ಕಛೇರಿಗೆ ಸಂದಾನಕ್ಕೆ ಕರೆದು ದರವನ್ನು ಕಡಿಮೆ ಮಾಡಲು ಕೋರಿದ್ದು, ಗುತ್ತಿಗೆದಾರರು 19-11-2013 ರಂದು ದರವನ್ನು ಕಡಿಮೆ ಮಾಡಲು ಸಾಧ್ಯವಿಲ್ಲ ಎಂದು ಪತ್ರದ ಮೂಲಕ ತಿಳಿಸಿರುತ್ತಾರೆ. ಟೆಂಡರ್‌ನು ಅನುಮೋದನೆ ಮಾಡಲು ಮಾನ್ಯ ಆಯುಕ್ತರಿಗೆ "Through proper chanel" ಕಳುಹಿಸಲಾಗಿದ್ದು, ಮಾನ್ಯ ಆಯುಕ್ತರು ದಿ: 8-1-2014 ರಂದು ಸದರಿ ಎಲ್1 ಗುತ್ತಿಗೆದಾರರಿಂದ ಮತ್ತೊಮ್ಮೆ ದರವನ್ನು "Negotiated ಮಾಡಲು ಸೂಚಿಸಿರುತ್ತರೆ. ಮಾನ್ಯ ಆಯುಕ್ತರ ಸೂಚನೆಯ ಮೇರೆಗೆ ಗುತ್ತಿಗೆದಾರರಾದ ಶ್ರೀ. ಮುನಿವೆಂಕಟಪ್ಪ ರಾಜೇಂದ್ರ ರವರಿಗೆ ಈ ಕಛೇರಿಯಿಂದ ಸಂ: EE(P)E/TEND/Nego/263/13-14ದಿ: 18-11-2013 ರಂದು ಪತ್ರ ನೀಡಲಾಗಿತ್ತು. ಗುತ್ತಿಗೆದಾರರು ದಿ: 16-01-2014 ರಂದು ತಮ್ಮ ಪತ್ರ ನೀಡಿ ತಾವು ನಮೂದಿಸಿರುವ ದರವು ರೀಸನಬಲ್ ಆಗಿದ್ದು, ತಮ್ಮ ಕೋರಿಕೆಯ ಮೇರೆಗೆ ತಾನು ರೂ. 119382762.87 ಗಳಿಗೆ ಸದರಿ ಕಾಮಗಾರಿಯನ್ನು ನಿರ್ವಹಿಸಲು ಸಿದ್ದನಿದ್ದೇನೆ ಎಂದು ಪತ್ರದ ಮುಖಾಂತರ ತಿಳಿಸಿರುತ್ತಾರೆ. ಪತ್ರದೊಂದಿಗೆ Negotiated schedule B ಸಹ ನೀಡಿರುತ್ತಾರೆ. Negotiated schedule B ದರದೊಂದಿಗೆ ತುಲಾನಾತ್ಮಕ ಪಟ್ಟಿಯಲ್ಲಿ ಹೋಲಿಸಿದಾಗ ಪ್ರಸಕ್ತ ಸಾಲಿನ 2013-14 ನೇ ಸಾಲಿಗೆ 22.06% ಹೆಚ್ಚಿಗೆ ಆಗಿರುತ್ತದೆ. (Comparative statementನ್ನು ಕಡತದಲ್ಲಿ ಲಗತ್ತಿಸಿದೆ) ದಿ: 01-2-2014 ರಂದು ಮಾನ್ಯ ಆಯುಕ್ತರು ಸದರಿ ಟೆಂಡರ್‌ನ್ನು ರೂ. 119382762.87 ಗಳಿಗೆ ಅನುಮೋದಿಸಿರುತ್ತಾರೆ. ಇದು ಅಂದಾಜುಪಟ್ಟಿಯ ದರಕ್ಕೆ 46.96% ಹೆಚ್ಚಿಗೆಯಾಗಿರುತ್ತದೆ. ಹಾಗೂ 2013-14 ನೇ ಸಾಲಿನ ದರಪಟ್ಟಿಗೆ 22.06% ಹೆಚ್ಚಿಗೆಯಾಗಿರುತ್ತದೆ.

ಈ ಹಿನ್ನಲೆಯಲ್ಲಿ ಈ ಕೆಳಕಂಡ ಅಂಶಗಳಿಗೆ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಗೆ ಟಿಪ್ಪಣಿಯನ್ನು ತಯಾರಿಸಿ ಅನುಮೋದನೆಗಾಗಿ ಮಂಡಿಸಿದೆ.

1. ಎಲ್ 1 ಗುತ್ತಿಗೆದಾರರಾದ ಮುನಿವೆಂಟಪ್ಪ ರಾಜೇಂದ್ರ ರವರು ನಮೂದಿಸಿರುವ ದರ ರೂ. 119382762.87 ಗೆ.
2. ಟೆಂಡರ್ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಘನ ಸರ್ಕಾರಕ್ಕೆ ಸಲ್ಲಿಸಲು.ಅನುಮೋದನೆಗಾಗಿ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ದಿನಾಂಕ:22–02–2014ರ ಆಯುಕ್ತರು ರವರ ಟಿಪ್ಪಣಿ.

**: ಮುಂದೂಡಿದೆ :**

**12] ವಿಷಯ ಸಂಖ್ಯೆ: ಬೃ.ಸಾ.ಕಾ.ಸ್ಥಾ.ಸ:/ 125/2013–14**

ವಿಷಯ: Water leakage repairs in under pass in Mekhri circle ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಮುಖಾಂತರ ಪ್ರಾರಂಭಿಸಿದ ಕ್ರಮಕ್ಕೆ ಸ್ಥಿರೀಕರಣ ಕೋರಿ.

***

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬಳ್ಳಾರಿ ರಸ್ತೆಯು ನಗರದ ಕೇಂದ್ರ ಭಾಗದಿಂದ ಮೇಖ್ರಿ ವೃತ್ತದ ಅಂಡರ್‌ಪಾಸ್ ಮುಖಾಂತರ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯಾಗಿರುತ್ತದೆ. ಸದರಿ ರಸ್ತೆಯಲ್ಲಿ ಗಣ್ಯರು ಅತಿ ಗಣ್ಯರು, ವಿದೇಶಿ ಪ್ರವಾಸಿಗರು ಹಾಗೂ ಸಾರ್ವಜನಿಕರು ಸಂಚರಿಸುವ ರಸ್ತೆಯಾಗಿದ್ದು, ಮೇಖ್ರಿ ವೃತ್ತದ ಕೆಳಸೇತುವೆಯಲ್ಲಿರುವ ಗ್ರೇಟಿಂಗ್ ಭಾಗದಲ್ಲಿ Ground water seepage ಆಗುತ್ತಿದ್ದು ಹಲವಾರು ಬಾರಿ ಈ ಭಾಗದಲ್ಲಿ ಡಾಂಬರೀಕರಣಗೊಳಿಸಿದ್ದರೂ ಸಹ Ground water seepage ಯಿಂದಾಗಿ ಸದರಿ ಭಾಗವು ಶಿಥಿಲಗೊಂಡಿರುತ್ತದೆ. ಇದರಿಂದಾಗಿ ವಾಹನಗಳ ಸುಗಮ ಸಂಚಾರಕ್ಕೆ ಅನಾನುಕೂಲವಾಗುತ್ತಿದ್ದು, ರಸ್ತೆಯ ಸದರಿ ಭಾಗವನ್ನು ತುರ್ತಾಗಿ ದುರಸ್ಥಿ ಮಾಡಲು ಅವಶ್ಯಕತೆ ಇರುತ್ತದೆ.

ಸದರಿ ರಸ್ತೆಯ ಶಿಥಿಲಗೊಂಡ ಗ್ರೇಟಿಂಗ್ ಭಾಗವನ್ನು ದುರಸ್ಥಿಗೊಳಿಸಲು ಘನ ಉಚ್ಛ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಸೂಚಿಸಿದ್ದು, ಆಯುಕ್ತರು ಸದರಿ ಭಾಗವನ್ನು ತುರ್ತಾಗಿ ದುರಸ್ಥಿಗೊಳಿಸಲು ತಿಳಿಸಿರುತ್ತಾರೆ. ಈ ಮೇರೆಗೆ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ–ಪೂರ್ವ ವಿಭಾಗ ರವರು ವಿಶಿಷ್ಟ ತಂತ್ರಜ್ಞಾನದಿಂದ Ground water seepage ನೀರನ್ನು ನಿಲ್ಲಿಸಿ ವಾಹನಗಳ ಸುಗಮ ಸಂಚಾರಕ್ಕೆ ಅನುವಾಗುವಂತೆ ಸದರಿ ಭಾಗವನ್ನು ದುರಸ್ಥಿಗೊಳಿಸಲು ರೂ. 16.00 ಲಕ್ಷ ಮೊತ್ತಕ್ಕೆ ಅಂದಾಜು ಪಟ್ಟಿ ತಯಾರಿಸಿ ಅನುಮೋದನೆಗಾಗಿ ಸಲ್ಲಿಸಿದ್ದು, ಸದರಿ ಕಾಮಗಾರಿಗೆ ಮಾನ್ಯ ಆಯುಕ್ತರು ಅನುಮೋದನೆ ನೀಡಿರುತ್ತಾರೆ.

ಸದರಿ ಕಾಮಗಾರಿಯು ತುರ್ತಾಗಿರುವುದರಿಂದ ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸಿ ಕಾಮಗಾರಿಯನ್ನು ನಿರ್ವಹಿಸಲು ಕ್ರಮ ವಹಿಸಲಾಗಿದ್ದು, ತೆಗೆದುಕೊಂಡ ಕ್ರಮಕ್ಕೆ ಸ್ಥರೀಕರಣ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಾಂಡಿಸಲಾದ ದಿನಾಂಕಃ25–02–2014ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕಃ 25–02–2014ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**13] ವಿಷಯ ಸಂಖ್ಯೆಃ ಬೃ.ಸಾ.ಕಾ.ಸ್ಥಾ.ಸ:/ 126/2013–14**

ವಿಷಯ: Improvements and providing painting to Rajabhavan road, Dr. Ambedkar Street, Race course road, Bellary main road, Kumara Krupa road, Vittalmalya road and Hudson circle surroundings in east zone ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಮುಖಾಂತರ ಪ್ರಾರಂಭಿಸಿದ ಕ್ರಮಕ್ಕೆ ಸ್ಥಿರೀಕರಣ ಕೋರಿ.

***

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, Rajabhavan road, Dr. Ambedkar Street, Race course road, Bellary main road, Kumara Krupa road, Vittalmalya road and Hudson circle ಸುತ್ತಮುತ್ತ ರಸ್ತೆಗಳು ಪ್ರಮುಖ ರಸ್ತೆಗಳಾಗಿದ್ದು, ನಗರದ ಕೇಂದ್ರ ಭಾಗದಿಂದ ಹಾಯ್ದು ಹಲವು ಪ್ರಮುಖ ರಸ್ತೆಗಳನ್ನು ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಗಳಾಗಿರುತ್ತವೆ. ಸದರಿ ರಸ್ತೆಗಳಲ್ಲಿ ಗಣ್ಯರು, ಅತಿ ಗಣ್ಯರು ಹಾಗೂ ಸಾರ್ವಜನಿಕರು ಸಂಚರಿಸುವ ರಸ್ತೆಯಾಗಿದ್ದು, ರಸ್ತೆ ಬದಿಯಲ್ಲಿ ಶೇಖರಣೆಯಾಗಿರುವ ತ್ಯಾಜ್ಯ ವಿಲೇವಾರಿ, ರಸ್ತೆ ಬದಿಯ ಕರ್ಬ್‌ಗಳನ್ನು ಸ್ವಚ್ಛಗೊಳಿಸಿ ಬಣ್ಣ ಬಳಿಯುವುದು ಹಾಗೂ ಈ ರಸ್ತೆಗಳಿಗೆ ಹೊಂದಿಕೊಂಡಿರುವ ಸಣ್ಣ ಪಾರ್ಕ್‌ಗಳ ಗ್ರಿಲ್‌ಗಳಿಗೆ ಬಣ್ಣಬಳಿಯುವ ಅವಶ್ಯಕತೆ ಇರುತ್ತದೆ.

ನಗರಕ್ಕೆ ವಿದೇಶಿ ಗಣ್ಯರು ಭೇಟಿ ನೀಡುತ್ತಿರುವ ಹಿನ್ನಲೆಯಲ್ಲಿ ಸದರಿ ರಸ್ತೆಗಳನ್ನು ಸುಂದರವಾಗಿ ಕಾಣುವಂತೆ ಮಾಡಲು ಮಾನ್ಯ ಆಯುಕ್ತರು ದಿನಾಂಕಃ 18–01–2014ರಂದು ನಡೆದ ಸಭೆಯಲ್ಲಿ ಸೂಚಿಸಿದ್ದರ ಮೇರೆಗೆ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ–ಪೂರ್ವ ವಿಭಾಗ ರವರು ರೂ. 24.00 ಲಕ್ಷ ಮೊತ್ತಕ್ಕೆ ಅಂದಾಜು ಪಟ್ಟಿ ತಯಾರಿಸಿ ಅನುಮೋದನೆಗಾಗಿ ಸಲ್ಲಿಸಿದ್ದು, ಸದರಿ ಕಾಮಗಾರಿಗೆ ಮಾನ್ಯ ಆಯುಕ್ತರು ಅನುಮೋದನೆ ನೀಡಿರುತ್ತಾರೆ.

ಸದರಿ ಕಾಮಗಾರಿಯು ತುರ್ತಾಗಿರುವುದರಿಂದ ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸಿ ಕಾಮಗಾರಿಯನ್ನು ನಿರ್ವಹಿಸಲು ಕ್ರಮ ವಹಿಸಲಾಗಿದ್ದು, ತೆಗೆದುಕೊಂಡ ಕ್ರಮಕ್ಕೆ ಸ್ಥಿರೀಕರಣ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಾಂಡಿಸಲಾದ ದಿನಾಂಕಃ25-02-2014ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕಃ 25-02-2014ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**(ಬಿ.ಸೋಮಶೇಖರ್)**
ಅಧ್ಯಕ್ಷರು
ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ